ಕನ್ನಡ ಕವಿಕಾವ್ಯಮಾಲೆ

ಬೆಳ್ಳಿ ಹಬ್ಬದ ಪ್ರಕಟಣೆ

ಕನ್ನಡ ಸೌಂದರ್ಯಲಹರಿ

ಸಿ.ಪಿ.ಕೆ.

ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು-೪

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು

H. M. SHANKAR NARAYAN RAO, M.A.
Professor and Head of the Department of Kannada,
Sharada Vilas College, Mysore-4

ಪ್ರಥಮ ಮುದ್ರಣ : ೧೯೬೯ (ಅಗಸ್ಟ್)

ಬೆಲೆ : ಒಂದೂವರೆ ರೂಪಾಯಿ

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಅರಿಕೆ

ಶ್ರೀಮಚ್ಛಂಕರಾಚಾರ್ಯರ 'ಸೌಂದರ್ಯಲಹರಿ'ಯನ್ನು ನಾನು ಕನ್ನಡಿಸಿದ್ದು ಅದರ ಕಾವ್ಯಗುಣಕ್ಕೆ ಮನಸೋತು. ಈ ಶತಕದಲ್ಲಿ ಎರಡು ಭಾಗಗಳಿವೆ: ಆನಂದಲಹರಿ ಮತ್ತು ಸೌಂದರ್ಯಲಹರಿ. ಆನಂದಲಹರಿಯಲ್ಲಿ ತಾಂತ್ರಿಕ ಮೌಲ್ಯ ಪ್ರಧಾನವಾಗಿದ್ದರೆ, ಸೌಂದರ್ಯಲಹರಿಯಲ್ಲಿ ಕಾವ್ಯಮೌಲ್ಯ ಪ್ರಧಾನವಾಗಿದೆ. ಸಾಹಿತ್ಯದೃಷ್ಟಿಯಿಂದ ಅಗಣ್ಯವೆನಿಸಿದ ಮತ್ತು ಅನುವಾದಿಸಲು ದುಷ್ಕರವಾಗಿ ಕಂಡ ಆನಂದಲಹರಿಯ ಹನ್ನೊಂದು ಪದ್ಯಗಳನ್ನು ಇಲ್ಲಿ ಅನುವಾದಿಸಿಲ್ಲ. ಇಲ್ಲಿನ ಮೊದಲ ಇಪ್ಪತ್ತೊಂಬತ್ತು ಪದ್ಯಗಳು ಆನಂದ ಲಹರಿಯವು.

ಕಡೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳನ್ನು ಕೇವಲ ಕಾವ್ಯದೃಷ್ಟಿಯಿಂದ ಸಿದ್ಧಪಡಿಸಲಾಗಿದೆ; ತಾಂತ್ರಿಕ ವಿಷಯಗಳ ವಿವರಣೆಗೆ ಕೈಹಾಕಿಲ್ಲ. ಆ ಕೆಲಸಕ್ಕೆ ನಾನು ಸಮರ್ಥನೂ ಅಲ್ಲ. ಅತ್ಯುತ್ತಮವೆನಿಸಿದ ಕೆಲವು ಮೂಲ ಪದ್ಯಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಈ ಅನುವಾದ ಮೂಲವನ್ನು ಅತ್ಯಂತ ಶ್ರದ್ಧೆಯಿಂದ ಅನುಸರಿಸಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಇದು ಕಾವ್ಯಪ್ರೇಮಿಗಳಿಗೆ, ರಸಜ್ಞರಿಗೆ ಇಷ್ಟವಾದರೆ ನನ್ನ ಶ್ರಮ ಸಾರ್ಥಕ.

ಈ ಕೃತಿಯನ್ನು ತಮ್ಮ ಮಾಲೆಯಲ್ಲಿ ಬೆಳ್ಳಿ ಹಬ್ಬದ ಒಂದು ಕುಸುಮವನ್ನಾಗಿ ಸೇರಿಸಿಕೊಂಡ ಗುಣಪಕ್ಷಪಾತಿಗಳಾದ ಪ್ರೊ. ಎಚ್. ಎಂ. ಶಂಕರನಾರಾಯಣರಾಯರಿಗೆ ನನ್ನ ನಮಸ್ಕಾರ. ಇದನ್ನು ಸೊಗಸಾಗಿ ಮುದ್ರಿಸಿ ಕೊಟ್ಟಿರುವ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರ ಸಹಾಯವನ್ನು ನೆನೆಯುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಸಿ. ಪಿ. ಕೃಷ್ಣಕುಮಾರ್

ಪರಿವಿಡಿ

ಪೀಠಿಕೆ ೫
ಕನ್ನಡ ಸೌಂದರ್ಯಲಹರಿ ೧೯
ಅನುಬಂಧ ೩೫
ಟಿಪ್ಪಣಿಗಳು ೩೮

ಪೀಠಿಕೆ

೧

ಅಹಂ ಬ್ರಹ್ಮಾಸ್ಮಿ, ಶಿವೋಹಂ—ಎಂದು ಉದ್‌ಘೋಷಿಸಿ ಅದ್ವೈತ ಸಿದ್ಧಾಂತದ ವಿಜಯದುಂದುಭಿಯನ್ನು ಅಪ್ರತಿಹತವಾಗಿ ಮೊಳಗಿಸಿ ಭರತ ಖಂಡದ ಧಾರ್ಮಿಕ ಜಗತ್ತಿನಲ್ಲೊಂದು ಮಹತ್ತರ ಕ್ರಾಂತಿಯನ್ನೆಬ್ಬಿಸಿದ ಪ್ರಚಂಡ ಚೇತನ ಶ್ರೀ ಶಂಕರಾಚಾರ್ಯರು. ವೇದಾಂತಿ, ವಾದಿ, ತಾರ್ಕಿಕ, ಭಕ್ತ, ಅನುಭಾವಿ-ಎಲ್ಲವೂ ಆಗಿರುವ ಬಹುಮುಖ ವ್ಯಕ್ತಿತ್ವ ಆಚಾರ್ಯರದು. ಇಷ್ಟಲ್ಲದೆ ಅವರು ಶ್ರೇಷ್ಠಸ್ತರದ ಕವಿಯೂ ಹೌದು. ಅವರು ಪ್ರಸ್ಥಾನ ತ್ರಯಕ್ಕೆ ರಚಿಸಿರುವ ಲೋಕಪ್ರಸಿದ್ಧವಾದ ಭಾಷ್ಯಗಳಲ್ಲಿ ಅವರ ಧೀಶಕ್ತಿಯ ಗಭೀರತೆ ಪ್ರಖರತೆ ನಿಶಿತತೆಗಳು ಅರಿವಾಗುವಂತೆಯೆ ಅವರ ಸ್ತೋತ್ರಗಳಲ್ಲಿ ಕವಿಹೃದಯದ ಭಾವಪ್ರಗಾಢತೆಯ ಪರಿಚಯವಾಗುತ್ತದೆ. ತಮ್ಮ ವೇದಾಂತ ಗ್ರಂಥಗಳಲ್ಲಿ ಅಧ್ಯಾತ್ಮಕ್ಕೆ, ಮನೋವಿಜ್ಞಾನಕ್ಕೆ ಮತ್ತು ವಿಜ್ಞಾನಕ್ಕೆ ಕೂಡ ಕೆಲವು ಅಪೂರ್ವವಾದ, ಆಧುನಿಕ ವಿಚಾರಸಮ್ಮತವಾದ ಕೊಡುಗೆಗಳನ್ನಿತ್ತಿರುವ ಆಚಾರ್ಯರು ತಮ್ಮ ಸ್ತೋತ್ರಕೃತಿಗಳಲ್ಲಿ ಬಹು ಸುಂದರವಾದ, ಭಗವದರ್ಪಿತವಾದ ಕವಿತೆಯನ್ನು ಅನುಗ್ರಹಿಸಿದ್ದಾರೆ.

ಜ್ಞಾನಮಾರ್ಗ ಭಕ್ತಿಮಾರ್ಗಗಳ ಸಮನ್ವಯವನ್ನು ಶಂಕರಾಚಾರ್ಯರ ಬದುಕಿನಲ್ಲಿ ಮತ್ತು ಕೃತಿಗಳಲ್ಲಿ ನೋಡುತ್ತೇವೆ; ಅವರು ಅದ್ವೈತ ಸಿದ್ಧಾಂತದ ಮೂಲಕ ನಿರ್ಗುಣೋಪಾಸನೆಯನ್ನು ಪ್ರತಿಪಾದಿಸಿರುವಂತೆಯೇ ತಮ್ಮ ಸ್ತೋತ್ರಗಳಲ್ಲಿ ಸಗುಣೋಪಾಸನೆಯನ್ನು ಎತ್ತಿಹಿಡಿದಿದ್ದಾರೆ. ದ್ವೈತ ಅದ್ವೈತಕ್ಕೆ ವಿರೋಧಿಯಲ್ಲ, ಅದರ ಪ್ರಥಮ ಸೋಪಾನ ಮಾತ್ರ; ಅಂತಿಮವಾಗಿ ದ್ವೈತ ಅದ್ವೈತದಲ್ಲಿ ಪರ್ಯವಸಾನವಾಗಬೇಕು. ಇದನ್ನು ಆಚಾರ್ಯರ ಸ್ತೋತ್ರ ಗ್ರಂಥಗಳ ವಿಷಯದಲ್ಲಿ ನೆನಪಿಡಬೇಕಾಗುತ್ತದೆ.

ಶ್ರೀಮದಾಚಾರ್ಯರ ಭಜಗೋವಿಂದ ಸ್ತೋತ್ರ, ದಕ್ಷಿಣಾಮೂರ್ತಿ ಸ್ತೋತ್ರ, ಶಿವಾನಂದಲಹರಿ ಮುಂತಾದ ಸ್ತೋತ್ರಕೃತಿಗಳಲ್ಲಿ 'ಸೌಂದರ್ಯಲಹರಿ' ಶಿರೋರತ್ನಪ್ರಾಯವಾದುದು; ಸಂಸ್ಕೃತ ಸ್ತೋತ್ರ ಸಾಹಿತ್ಯಪರಂಪರೆಯಲ್ಲಿ ಅದು

ತನ್ನದೆ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಅದು ಸ್ತೋತ್ರವಷ್ಟೆ ಆಗಿರದೆ, ಅದ್ವಿತೀಯವಾದ ಮಂತ್ರಶಾಸ್ತ್ರವೆಂದು ಪ್ರಖ್ಯಾತವಾಗಿದೆ. ಸಾಮಾನ್ಯವಾಗಿ ಅದಕ್ಕೆ ಮಂತ್ರಶಾಸ್ತ್ರವೆಂದೆ ಭರತವರ್ಷದಲ್ಲಿ ಅಗ್ರಪ್ರಾಶಸ್ತ್ಯವಿರುವುದು ; ಈ ದೃಷ್ಟಿಯಿಂದಲೆ ಅದರ ಬಗೆಗೆ ಹತ್ತಿರ ಹತ್ತಿರ ನೂರರಷ್ಟು ವ್ಯಾಖ್ಯಾನಗಳು ದೇಶಾದ್ಯಂತ ಹುಟ್ಟಿಕೊಂಡಿದೆ. 'ಸೌಂದರ್ಯಲಹರಿ' ಗಳಿಸಿಕೊಂಡಿರುವ ಜನಪ್ರಿಯತೆ, ಪೂಜೆ ಪುರಸ್ಕಾರಗಳಿಗೆ ಇದಕ್ಕಿಂತ ಉಜ್ವಲವಾದ ಸಾಕ್ಷಿ ಬೇಕಿಲ್ಲ. ಆದರೆ ವ್ಯಾಖ್ಯಾನಕಾರರು ಈ ಕೃತಿಗೆ ನೀಡಿದ ಮಂತ್ರಶಾಸ್ತ್ರೀಯವಾದ ಮಹತ್ವ ಅದರ ಕಾವ್ಯಸ್ವರೂಪವನ್ನು ಹಿಂದೆ ಹಾಕಿದಂತೆ ತೋರುತ್ತದೆ. ವಾಸ್ತವವಾಗಿ, ಈ 'ಸೌಂದರ್ಯಲಹರಿ'ಗೆ ಯಾಂತ್ರಿಕ, ತಾಂತ್ರಿಕ ಮೌಲ್ಯಗಳಿಂದ ವಿಭಿನ್ನವಾದ, ಸ್ವತಂತ್ರವಾದ, ಗಣನೀಯವಾದ ಕಾವ್ಯ ಮೌಲ್ಯವಿರುವುದು ಸುಸ್ಪಷ್ಟವಾದ ವಿಚಾರ.

'ಸೌಂದರ್ಯಲಹರಿ'ಯೊಂದು ಶತಕ; ಇದರಲ್ಲಿ ಎರಡು ಭಾಗಗಳಿವೆ: ಒಂದು ಆನಂದಲಹರಿ, ಮತ್ತೊಂದು ಸೌಂದರ್ಯಲಹರಿ. ಮೊದಲಿನ ನಲವತ್ತು ಪದ್ಯಗಳನ್ನೊಳಗೊಂಡಿರುವ ಆನಂದಲಹರಿಯಲ್ಲಿ ತಾಂತ್ರಿಕ ಸ್ವರೂಪ ಪ್ರಧಾನವಾಗಿದೆ; ಇದರಲ್ಲಿ ಶ್ರೀಚಕ್ರ, ಶ್ರೀವಿದ್ಯೆ, ಕೆಲವು ಪ್ರಯೋಗಗಳು ಇತ್ಯಾದಿಗಳ ನಿರೂಪಣೆಯಿದೆ. ಉಳಿದ ಅರುವತ್ತು ಪದ್ಯಗಳಲ್ಲಿ ರೂಪಗೊಂಡಿರುವ ಸೌಂದರ್ಯಲಹರಿಯಲ್ಲಿ ನಿಜವಾದ ಕಾವ್ಯವನ್ನು ಕಾಣುತ್ತೇವೆ.

ಈ ಕೃತಿಯಲ್ಲಿ ಶ್ರೀ ಶಂಕರಾಚಾರ್ಯರು ತ್ರಿಜಗನ್ಮಾತೆಯಾದ ಆದಿಶಕ್ತಿಯನ್ನು ಭಕ್ತಿಭಾವಪರವಶತೆಯಿಂದ ಸ್ತೋತ್ರಿಸಿದ್ದಾರೆ. ಅವರು ಜ್ಞಾನಿಯಷ್ಟೇ ಅಲ್ಲ, ಜಿಜ್ಞಾಸು ಮಾತ್ರವೇ ಅಲ್ಲ, ಆರ್ತರೂ ಹೌದು ಎನ್ನುವುದು ಅವರ ಕಳಕಳಿಯ ಹಾರೈಕೆ ಪ್ರಾರ್ಥನೆಗಳಲ್ಲಿ ವ್ಯಕ್ತವಾಗುತ್ತದೆ. ಶ್ರೀದೇವಿಯ ಮಹಿಮೆಯ ಸಂಕೀರ್ತನೆ, ಆ ತ್ರಿಪುರಸುಂದರಿಯ ಅಸಮ ಲಾವಣ್ಯದ ವರ್ಣನೆ, ಅವಳ ಕೃಪೆಯ ಯಾಚನೆ-ಇವು ಈ 'ಸೌಂದರ್ಯಲಹರಿ'ಯ ತ್ರಿವೇಣಿ. ಆದಿಶಕ್ತಿಯ ಸರ್ವಾಂಗ ಸೌಂದರ್ಯವನ್ನು ಆಚಾರ್ಯರು ಮುಡಿಯಿಂದ ಅಡಿಯವರೆಗೆ ಪರಿಪರಿಯಾಗಿ ಬಣ್ಣಿಸಿದ್ದಾರೆ; ಆದರೆ ಅದು ಸಾಂಪ್ರದಾಯಿಕ ಸ್ತ್ರೀವರ್ಣನೆಯ ಮಾದರಿಯಾಗದೆ, ಜಗಜ್ಜನನಿಯನ್ನು ಶುದ್ಧ ಮುಗ್ಧ ಶಿಶುಭಾವದಿಂದ, 'ಮೊಲೆಯುಂಬ ಭಾವ' ದಿಂದ ಕಂಡು ಕಂಡರಿಸುವ

ಉದಾತ್ತ ಸಾಹಸವಾಗಿದೆ. ಉದ್ದಕ್ಕೂ ಸ್ಥಾಯಿಯಾಗಿರುವ ಈ ಶಿಶು ಮನೋಧರ್ಮದಿಂದಲೇ 'ಸೌಂದರ್ಯಲಹರಿ' ಅನನ್ಯ ಕೃತಿಯಾಗಿರುವುದು. ಆದಿಶಕ್ತಿಯ ಕಲ್ಪನೆ ಹೆಣ್ಣಿನ ಕಲ್ಪನೆ, ನಿಜ; ಆದರೆ ಆಕೆ ಸಾಮಾನ್ಯ ಹೆಣ್ಣಲ್ಲ—ಸಕಲ ಸೌಂದರ್ಯದ ಆಕರ, ಪರಬ್ರಹ್ಮಸ್ವರೂಪಿಣಿ, ವಿಶ್ವಾಕಾರೆ, ಅಖಿಲ ಲೋಕಗಳ ತಾಯಿ. ಅವಳ ಚೆಲುವನ್ನು ಒಂದು ಅತ್ಯುನ್ನತ ಮನೋಭೂಮಿಕೆಯಲ್ಲಿ ಸಂದರ್ಶಿಸಿದ್ದಾರೆ ಆಚಾರ್ಯರು. ಆ ಎತ್ತರದ ನೆಲೆಯಿಂದ ಮೂಡಿಬಂದಿರುವ ಈ ದೇವೀಸೌಂದರ್ಯ ವರ್ಣನೆ ಶೃಂಗಾರರಂಜಿತವಾದ, ಭವಕಲುಷಿತವಾದ ಸುಂದರ ವಿರಚನೆಯಷ್ಟೆ ಆಗದೆ, ಅಲೌಕಿಕ ಪ್ರಭಾವಳಿಯನ್ನು ಪಡೆದುಕೊಂಡು ತೊಳಗುತ್ತಿರುವ ಶಿವಸೃಷ್ಟಿಯಾಗಿದೆ; ವಾಚಕರ ಅಥವಾ ಶ್ರೋತೃಗಳ ಚಿತ್ತವನ್ನು ಕೂಡ ಆ ನಿರುಪಾಧಿಕವಾದ ನೆಲೆಗೆ ಕೊಂಡೊಯ್ಯುವ ಶಕ್ತಿಯಿಂದ ಕೂಡಿದೆ. ಕವಿಸಮಯಗಳು, ಸಂಪ್ರದಾಯಪರವಾದ ಅಲಂಕಾರಗಳು ಇಲ್ಲಿಲ್ಲವೆಂದಲ್ಲ, ಇವೆ. ಆದರೆ ಅವು ಅತ್ಯುದಾತ್ತವಾದ, ಭವ್ಯವಾದ ಕಲ್ಪನೆಗಳಿಗೆ ಪೂರಕವಾಗಿ ನಿಂತು ಸಂಪೂರ್ಣ ಸಾರ್ಥಕವಾಗಿವೆ. ಸಾಮಾನ್ಯ ಸ್ತ್ರೀಗೆ ಅನ್ವಯಿಸಿದಾಗ ಉತ್ಪ್ರೇಕ್ಷೆಯಾಗಿ, ಕವಿಸಮಯವಾಗಿ ಯಾವುದು ತೋರಬಹುದೋ ಅದು ಜಗದ್ಧಾತ್ರಿಗೆ ಸಹಜವಾಗಿ, ಸಮರ್ಪಕವಾಗಿ ಒಪ್ಪುತ್ತದೆ.

೨

ಶಂಕರಾಚಾರ್ಯರು ಮೊದಲು ಆದಿಶಕ್ತಿಯ ಅನಂತ ರುಂದ್ರ ಮಹಿಮೆಯನ್ನು ಭಾವನಿರ್ಭರತೆಯಿಂದ ಕೀರ್ತಿಸುತ್ತಾರೆ. ಶ್ರೀದೇವಿ ವಿಶ್ವದ ಏಕಮೇವ ನಿಯಾಮಕ ಶಕ್ತಿ, ಸೃಷ್ಟಿಸ್ಥಿತಿಲಯಗಳ ಸೂತ್ರಧಾರಿಣಿ; ಬ್ರಹ್ಮವಿಷ್ಣುಮಹೇಶರೆಲ್ಲ ಅವಳ ಕೈಗೊಂಬೆಗಳು. ಅವಳಿಂದಲೇ ಹಗಲು ಇರುಳು, ಉಳಿವು ಅಳಿವು. ಶಿವ ಶಕ್ತಿಯೊಡಗೂಡಿ ಮಾತ್ರ ಲೋಕವನ್ನು ಸೃಜಿಸಬಲ್ಲ; ಶಕ್ತಿಯ ಕೃಪೆಯಿಲ್ಲದೆ ದೇವಗಣ ಅಲುಗಾಡುವುದೂ ಸಾಧ್ಯವಿಲ್ಲ. ಹರಿಹರ ವಿರಿಂಚಿ ಸೇವ್ಯಳಾದ ಆ ತಾಯಿಯನ್ನು ವಂದಿಸಿ ಸ್ತುತಿಸಬೇಕಾದರೂ ಪುಣ್ಯ ಮಾಡಿರಬೇಕು!

ದೇವಿಯ ಪದಕಮಲದ ಧೂಳಿಯಿಂದಲೇ ಬ್ರಹ್ಮ ಲೋಕಗಳನ್ನು ಸೃಷ್ಟಿಸುತ್ತಾನೆ; ಅದನ್ನು ಹರಿ ಕಾಪಿಡುತ್ತಾನೆ; ಅದನ್ನೆ ರುದ್ರ ನಾಶಮಾಡಿ ಬೂದಿ

ಬಳಿದುಕೊಳ್ಳುತ್ತಾನೆ. ಈ ಚರಣ ರಜದ ಮಹಿಮಾತಿಶಯವೆಂಥದು ಎಂಬು ದನ್ನು ಆಚಾರ್ಯರು ಶಕ್ತಿವತ್ತಾದ ರೂಪಕಗಳ ಮೂಲಕ ಚಿತ್ರಿಸುತ್ತಾರೆ:

ಚರಣರಜವಿದಜ್ಞಾನಿಹೃದಯ ತಿಮಿರವನು ಕಳೆವ ದಿನಪ;
ಜಡರಿಗಿದುವೆ ಮಕರಂದಭರಿತ ಚೈತನ್ಯದೊಂದು ಸ್ತಬಕ;
ಇದು ದರಿದ್ರಜನವೃಂದಕಹುದು ಚಿಂತಾಮಣಿಯ ಮಾಲೆ;
ಜನ್ಮಜಲಧಿಯಲಿ ಮುಳುಗಿ ಹೋದವರಿಗಿದು ವರಾಹದಾಡೆ!

ವರಾಹದಂಷ್ಟ್ರದ ಪೌರಾಣಿಕ ಪ್ರತಿಮೆ ಇಲ್ಲಿ ವಿಶಿಷ್ಟ ರೀತಿಯಲ್ಲಿ ಬಳಕೆ ಗೊಂಡಿರುವುದನ್ನು ಗಮನಿಸಬಹುದು.

ಬ್ರಹ್ಮನಿಂದ ಸೃಷ್ಟಿ, ವಿಷ್ಣುವಿನಿಂದ ರಕ್ಷಣೆ, ರುದ್ರನಿಂದ ಅಳಿವು. ಈಶ ನಾದರೊ ಈ ಮೂವರನ್ನೂ ತನ್ನ ಸಹಿತ ಲಯಗೊಳಿಸುತ್ತಾನೆ. ಬಳಿಕ ಆ ಸದಾಶಿವನೆ ಶ್ರೀ ದೇವಿಯ ಭ್ರೂಲತೆಯ ಕೇವಲ ಒಂದು ಚಲನೆಯಿಂದ ಆಜ್ಞಪ್ತನಾಗಿ ಎಲ್ಲವನ್ನೂ ಮತ್ತೆ ಮೊದಲಿಂದ ಸೃಜಿಸುತ್ತಾನೆ.

ಉಳಿದ ದೇವತೆಗಳೆಲ್ಲ ಅಭಯಹಸ್ತವನ್ನು ಮೇಲೆತ್ತಿ ವರ ಕೊಡುವಂತೆ ನಾಟಕವಾಡುತ್ತಾರೆ; ಆದರೆ ದೇವಿ ಅಂತಲ್ಲ. ಲೋಕಗಳನ್ನು ಭಯದಿಂದ ರಕ್ಷಿಸಿ, ಬಯಸಿದ್ದಕ್ಕಿಂತ ಮಿಗಿಲಾದ ಫಲವನ್ನು ಕೊಡುವುದಕ್ಕೆ ಅವಳ ಎರಡು ಚರಣ ಸಾಕು. "ಎಲೆ ಭವಾನಿ, ನಾನು ನಿನ್ನ ದಾಸ. ನನ್ನನ್ನು ಕೃಪೆ ಯಿಂದ ನೋಡು" ಎಂದು ಸ್ತೋತ್ರಿಸಬಯಸುವಾತ 'ಎಲೆ ಭವಾನಿ' ಎಂದು ನುಡಿಯುವಷ್ಟರಲ್ಲೆ ದೇವಿ ದೇವಗಣದ ಕಿರೀಟಗಳಿಂದ ಆರತಿಗೊಳ್ಳುವ ತನ್ನ ಸಾಯುಜ್ಯ ಪದವಿಯನ್ನು ನೀಡುತ್ತಾಳೆ. ಅವಳ ಕರುಣ ಅಷ್ಟು ದೊಡ್ಡದು.

ದೇವಿಯ ಮನೋಹರ ಚಿತ್ರಗಳನ್ನು ಶಂಕರಾಚಾರ್ಯರು ಪರಿಣಾಮಕಾರಿ ಯಾಗಿ ಕೊಡುತ್ತಾರೆ. ಘಲಿರೆಂದುಲಿಯುವ ಗೆಜ್ಜೆ ಕಟ್ಟಿದ ಡಾಬು, ಕರಿಕಲಭ ಕುಂಭ ಸಮಾನವಾದ ಸ್ತನಯುಗ, ಬಡನಡು, ಪೂರ್ಣ ಶಾರದ ಚಂದ್ರ ನಂತಹ ವದನ, ಬಿಲ್ಲು ಬಾಣ ಪಾಶಾಂಕುಶಗಳನ್ನು ಧರಿಸಿದ ಹಸ್ತ–ಹೀಗಿ ದ್ದಾಳಂತೆ ಲೋಕಮಾತೆ. "ಇಂತು ಪುರಹರಗು ಬೆರಗನೀವಳಿರಲೆನ್ನ ಮುಂದೆ ನಿತ್ಯ" ಎಂದು ಹಾರೈಸುತ್ತಾರೆ ಆಚಾರ್ಯರು. ಸಮಸ್ತ ವಿದ್ಯಾನಿಧಿಯಾದ ದೇವಿಯ ಶುಭ್ರಧವಳ ಸ್ವರೂಪವನ್ನೂ ಕೃಪಾಶಕ್ತಿಯನ್ನೂ ಮುಂದಿನ ಪದ್ಯ ಮತ್ತೂ ಹೃದ್ಯವಾಗಿ ನಿರೂಪಿಸುತ್ತದೆ:

ಶರಚ್ಚಂದ್ರಿಕಾ ಶುಭ್ರೆ ನೀನು ಶಶಿಜಟಾಜೂಟ ಮಕುಟಿ
ವರದಹಸ್ತೆ ಮೇಣಭಯಹಸ್ತೆ, ನೀ ಪುಸ್ತಕಾಕ್ಷಹಸ್ತೆ !
ನಿನ್ನನೊಮ್ಮೆ ನಮಿಸಿದರೆ ಸಾಕು—ಹಾಲ್ಜೇನು ದ್ರಾಕ್ಷೆಯಂಥ
ನುಡಿಯ ಪಡೆದು ಸತ್ಪುರುಷರೊಡನೆ ಬೆರೆಯುವನು ನಿನ್ನ ಭಕ್ತ !

ಕವೀಂದ್ರರ ಹೃದಯಕಮಲವನಕ್ಕೆ ದೇವಿ ಬಾಲಸೂರ್ಯನ ದೀಪ್ತಿಯಿದ್ದಂತೆ. ಆ ಅರುಣವರ್ಣೆಯನ್ನು ಪೂಜಿಸುವ ಪುಣ್ಯಾಧನರು ಕವಿತ್ವ ಸಾಮರ್ಥ್ಯವನ್ನು ಪಡೆದು ವಿದ್ವತ್ ಸಭೆಗಳನ್ನು ರಂಜಿಸಬಲ್ಲರು.

ಅಶರೀರನೂ ಅಸಹಾಯನೂ ಕೋಮಲಾಸ್ತ್ರನೂ ಆದ ಮನ್ಮಥ ಆ ಜಗನ್ಮೋಹಿನಿಯ ಕಿಂಚಿತ್ ಕೃಪಾವಲಂಬನದಿಂದಲೆ ಜಗತ್ತನ್ನು ಗೆಲ್ಲಲು ಸಮರ್ಥನಾಗುತ್ತಾನೆ :

ಕುಸುಮ ಕೋದಂಡ, ದುಂಬಿಗಳ ನಾರಿ, ಪಂಚ ಪುಷ್ಪಬಾಣ,
ಆ ವಸಂತ ಸಾಮಂತ, ಮಲಯ ಮಾರುತನೆ ರಣವರೂಥ—
ಆದರೂನು ಏಕಾಕಿಯಾಗಿ ಜಯಿಸುವನನಂಗ ಜಗವ :
ಹೇ ಹಿಮಾದ್ರಿಸುತೆ, ತಳೆದು ನಿನ್ನ ಕಡೆಗಣ್ಣಿನೊಂದು ಕೃಪೆಯ !

ದೇವಿಯ ಸ್ಮರಕಲೆಯನ್ನು ಸ್ಮರಿಸುವ ಭಕ್ತ ಅಂಗನೆಯರನ್ನು ಸುಲಭವಾಗಿ ಒಲಿಸುತ್ತಾನೆ. ಆ ಸಿದ್ಧಿ ಯಾವ ಗಹನ? "ಗೆಲ್ಲಬಲ್ಲನವ ಸೂರ್ಯಚಂದ್ರಕುಚವುಳ್ಳ ಮೂರು ಜಗವ!" ನಿಜಕ್ಕೂ ಅತ್ಯದ್ಭುತವಾದ ಕಲ್ಪನೆ. ಸಾಮಾನ್ಯ ಲಲನೆಯ ಚಿತ್ರವನ್ನು ಆಚಾರ್ಯರು ಸೂಚಿಸಿದರೂ, ತೆಕ್ಕನೆ ನಮ್ಮ ಚಿತ್ತವನ್ನು ಮೇಲೆತ್ತಿ ಭೂಮಕ್ಕೆಸೆಯುತ್ತಾರೆ. ಮೂರು ಲೋಕವೆ ಒಂದು ಹೆಣ್ಣು; ಸೂರ್ಯಚಂದ್ರ ಮಂಡಲಗಳೆ ಕುಚಯುಗ! ಯಥಾಶಕ್ತಿ ಕಲ್ಪಿಸಿಕೊಳ್ಳಬೇಕಷ್ಟೆ.

ಆಕೆಯ ಕಟಾಕ್ಷವೊಂದಿದ್ದರೆ ಹಣ್ಣುಹಣ್ಣು ಮುದುಕನೂ ರೂಪಯೌವನ ಸಂಪನ್ನನಾಗಿ ಅನುರಾಗಾಸ್ಪದನಾಗುತ್ತಾನೆ :

ಕಣ್ಣು ಕಳೆದಂಥ ರಾಗವಿಳಿದಂಥ ಮುದುಪನೆಡೆಗೆ ನೀನು
ಹರಿಸಿದರೆ ಕಟಾಕ್ಷವನು, ಅವನ ಬೆನ್ನಿನಲಿ ನೂರು ನೂರು
ಹರಿಣದಂಗನೆಯರೋಡಿಬಹರು—ಮುಡಿ ಸಡಲಿ, ಕಲಶ ಕುಚದ
ವಸ್ತ್ರಗಳು ಜಾರಿ, ಕಾಂಚಿಗಳು ತೂರಿ, ಕಳಚಿಬಿದ್ದು ದುಗುಲ !

ಇಂದ್ರ ಬ್ರಹ್ಮಾದಿ ದೇವಸಮೂಹವೆಲ್ಲ ಸುಧಾಪಾನ ಮಾಡಿದರೂ ಜರಾಮರಣ

ಗಳಿಗೆ ತುತ್ತಾಗುತ್ತದೆ. ಆದರೆ ಭೀಕರ ಕಾಳಕೂಟವನ್ನು ಕುಡಿದರೂ ಶಂಭು ಮಾತ್ರ ಚಿರಂಜೀವಿ. ಇದಕ್ಕೆ ಕಾರಣ ಆದಿಶಕ್ತಿಯ ಕಿವಿಯೋಲೆಯ ಮಹಿಮೆಯೆಂದು ಆಚಾರ್ಯರು ಊಹಿಸುತ್ತಾರೆ.

ತಮ್ಮ ವ್ಯಕ್ತಿತ್ವ ಸಮಸ್ತವನ್ನೂ ಜಗಜ್ಜನನಿಯ ಕೈಗೊಪ್ಪಿಸಿ, ಬದುಕಿನ ಸಕಲ ವ್ಯಾಪಾರಗಳೂ ಅವಳಿಗೆ ಸಂದ ಪೂಜೆಯೆಂದು ನಿವೇದಿಸುವಲ್ಲಿ ಶಂಕರಾಚಾರ್ಯರ ಅನನ್ಯ ಶರಣಾಗತಿಯ, ಸರ್ವಾರ್ಪಣದ ನಿಲುವು ಉಜ್ವಲವಾಗಿ ವ್ಯಕ್ತವಾಗುತ್ತದೆ :

ನಿನಗೆ ನನ್ನನರ್ಪಿಸಿಹೆ : ನಿನ್ನ ಜಪ ನನ್ನ ಜಲ್ಪವೆಲ್ಲ ;
ನನ್ನ ತಿರುಗಾಟ ನಿನಗೆ ಬಲವಂದ ಹಾಗೆ ; ನನ್ನ ಊಟ
ನಿನಗೆ ಸಲುವಂಥ ಹವನ ; ನನ್ನ ಮಲಗುವಿಕೆ ನಿನಗೆ ನಮನ—
ಹೀಗೆ ನನ್ನೆಲ್ಲ ಕರ್ಮ ವಿಲಸಿತವು ನಿನಗೆ ಪೂಜೆಯಮ್ಮ!

ಇಂಥ ಶಿಖರವನ್ನು ತಲಪಿದ ಚೇತನಕ್ಕೆ ಪ್ರತ್ಯೇಕ ಪೂಜೆ ಧ್ಯಾನಗಳ ಅಗತ್ಯವಿಲ್ಲ ; ಜೀವನವೆ ಮಹಾಪೂಜೆಯಾಗಿ ಪರಿಣಮಿಸುತ್ತದೆ.

೩

ಇನ್ನು ದೇವಿಯನ್ನು ಆಚಾರ್ಯರು ಆಪಾದಮಸ್ತಕ ವರ್ಣಿಸತೊಡಗುತ್ತಾರೆ. ಅವರು ಏರಿದ ಎತ್ತರ ಜಗನ್ಮಾತೆಯನ್ನು ನಿಸ್ಸಂಕೋಚವಾಗಿ, ನಿರ್ವಿಕಾರವಾಗಿ ಬಣ್ಣಿಸುವ ಅರ್ಹತೆಯನ್ನು ಅವರಿಗೆ ತಂದುಕೊಟ್ಟಿದೆ. ಆ ತಾಯ ಸೌಂದರ್ಯ ವಾರಾಶಿಯ ಒಂದೊಂದು ತರಂಗವನ್ನೂ ಹಿಡಿದಿಟ್ಟಿದ್ದಾರೆ ಆಚಾರ್ಯರು. ಒಂದೊಂದು ಚಿತ್ರವೂ ಬಂಧುರ, ಗೌರವಾಸ್ಪದ, ವಂದ್ಯ.

ದೇವಿಯ ಕಿರೀಟದಿಂದ ಪ್ರಾರಂಭವಾಗುತ್ತದೆ ವರ್ಣನೆ. ಅವಳ ಸುವರ್ಣ ಕಿರೀಟದಲ್ಲಿ ಮಣಿರೂಪ ತಳೆದಿರುವ ದ್ವಾದಶಾದಿತ್ಯರನ್ನು ಕೆತ್ತಲಾಗಿದೆ ; ರತ್ನ ಕಾಂತಿಯನ್ನು ಪಡೆದು ಹಲವು ಬಣ್ಣಗಳಿಂದ ಮೆರೆಯುವ ಅವಳ ನೊಸಲಿನ ಚಂದ್ರಖಂಡ ಇಂದ್ರಧನುವಿನಂತೆ ಕಂಗೊಳಿಸುತ್ತದೆ!

ಆ ಶಿವೆಯ ಮೃದುಸಾಂದ್ರ ಸ್ನಿಗ್ಧವಾದ ಕೇಶರಾಶಿ ನೀಲನೈದಿಲೆಯ ವನದಂತಿದೆ: ದೇವಿಯ ತುರುಬಿನಲ್ಲಿ ಸಹಜವಾಗಿರುವ ಸೌರಭವನ್ನು ಪಡೆದುಕೊಳ್ಳಲೆಂದು ಇಂದ್ರನಂದನದ ಕುಸುಮಸಮುದಾಯವೆಲ್ಲ ಅಲ್ಲಿಗೆ ಬಂದಿದೆ.

ದೇವಿಯ ಬೈತಲೆಯ ಸರಣಿ ನಮಗೆ ಶುಭವೀಯಲಿ ಎಂದು ಆಶಿಸುತ್ತಾರೆ ಆಚಾರ್ಯರು. ಆ ಬೈತಲೆಯ ಹೃದಯಂಗಮ ಚಿತ್ರವಿದು:

ನಿನ್ನ ಘನ ಕೇಶರಾಶಿಯೆಂದೆಂಬ ತಿಮಿರ ವೈರಿಗಳಿಗೆ
ಕೋಳುಹೋದ ಬಾಲಾರ್ಕ ಕಿರಣದೊಲು ತಳೆದು ಕುಂಕುಮವನು,
ವದನಸೌಂದರ್ಯ ಲಹರಿವಾಹಿನಿಯ ಸ್ರೋತಸರಣಿಯಂತೆ
ಮೆರೆವ ನಿನ್ನ ಬೈತಲೆಯ ಸರಣಿ ಕೊಡಲೆಮಗೆ ಶುಭವನಗಜೆ!

ದೇವಿಯ ವದನಕಮಲದಲ್ಲಿ ವಿಹರಿಸಿ ಹರನ ಕಣ್ಣುಗಳೆಂಬ ದುಂಬಿಗಳು ಮದಿಸುತ್ತವೆ:

ಸಹಜವಾಗಿ ಮರಿದುಂಬಿಯಂಥ ಮುಂಗುರುಳ ತಂಡದಿಂದ
ಸುತ್ತುಗೊಂಡಿರುವ ನಿನ್ನ ಮೊಗ ನಗುವುದಮ್ಮ ಕಮಲರುಚಿಯ!
ಮುಗುಳು ನಗೆಯ, ಸುಲಿಪಲ್ಲ ಕಾಂತಿಕೇಸರದ, ಸುರಭಿಯೊಗೆವ
ನಿನ್ನ ವದನಾಬ್ಜದಲ್ಲಿ ಸೊಕ್ಕುವುವು ಸ್ಮರಹರಾಕ್ಷಿಭೃಂಗ!

'ಸ್ಮರಹರಾಕ್ಷಿಭೃಂಗ' ಎಂಬ ಮಾತು ಇಲ್ಲಿ ಉಚಿತವಾದುದು. ಶಿವ ಮನ್ಮಥ ಹರನಾದರೂ ಶಿವೆಯ ಲಾವಣ್ಯಕ್ಕೆ ಸೋಲಬೇಕಾಯಿತು; ಕಾಮನ ಪ್ರತಾಪಕ್ಕೆ ಒಳಗಾಗಬೇಕಾಯಿತು.

ಭುವನದ ಭಯವನ್ನು ಭಂಗಿಸುವುದೇ ದೇವಿಗೆ ಸದಾ ಇರುವ ವ್ಯಸನ. ಅವಳ ನಸು ಕೊಂಕಿದ ಹುಬ್ಬು ಮದನ ಧನು, ಮಧುಪ ರುಚಿಯುಳ್ಳ ಕಣ್ಣುಗಳೆ ಹೆದೆ ಎಂದು ಆಚಾರ್ಯರ ಭಾವನೆ. ಈ ಬಿಲ್ಲನ್ನು ಮದನ ಎಡಗೈಯಲ್ಲಿ ಹಿಡಿದುಕೊಂಡಾಗ ಅದರ ಮಧ್ಯಭಾಗ ಅವನ ಮುಷ್ಟಿಯಲ್ಲೂ ಮುಂಗೈಯಲ್ಲೂ ಅಡಗಿ ಕಾಣದಾಗುತ್ತದೆ.

ಆಕರ್ಣಾಂತವಾದ ದೇವಿಯ ಕಣ್ಣುಗಳು ಕಾಮನ ಶರವಿಲಾಸವನ್ನು ಸೂಸುತ್ತ ಹರನನ್ನೂ ಚಂಚಲಗೊಳಿಸಿವೆ:

ಕಿವಿಯವರೆಗಿರುವ, ಬಾಣಗಳ ಗರಿಯ ಹೋಲುವಂಥ ಎವೆಯ,
ತ್ರಿಪುರಹರನ ಮಾನಸದ ಶಾಂತರಸವನ್ನು ಕೆಡಿಸಿದಂಥ,
ನಿನ್ನ ಕಣ್ಣುಗಳು, ಹೇ ಹಿಮಾಲಯನ ಕುಲದ ತೊಡವೆ, ಶಿವೆಯೆ—
ಕಿವಿಯವರೆಗೆಳೆದ ಸ್ಮರನ ಶರ ವಿಲಾಸವನು ಮೆರೆಯುತಿಹವೆ!

ದೇವಿ ಕಣ್ಣು ತೆರೆದಾಗ ಉದಯ, ಮುಚ್ಚಿದಾಗ ಪ್ರಳಯ. ತನ್ನ ಕಣ್ದೆರ

ವಿನಿಂದ ಹುಟ್ಟಿದ ಜಗವನ್ನು ಪ್ರಳಯದಿಂದ ಸಂರಕ್ಷಿಸುವುದಕ್ಕಾಗಿ ಅವಳು ಎವೆಯನ್ನೆ ಮುಚ್ಚುತ್ತಿಲ್ಲವೆಂದು ಭಾವಿಸುತ್ತಾರೆ ಆಚಾರ್ಯರು. ಅರಳಿದ ಉತ್ಪಲದ ಪ್ರಕಾಶವುಳ್ಳ ನೀಳ ನೋಟದಿಂದ, ದೂರವಿರುವ ದೀನನಾದ ತನ್ನನ್ನೂ ಮಿಾಯಿಸಬೇಕೆಂದು ಅವಳನ್ನು ಬೇಡಿಕೊಳ್ಳುತ್ತಾರೆ. ದೇವಿಗೆ ಪಕ್ಷಪಾತವುಂಟೆ ? ಮನೆಯಾಗಲಿ ವನವಾಗಲಿ ಚಂದ್ರ ಸಮಬುದ್ಧಿಯಿಂದ ಕಿರಣಗಳನ್ನು ಸುರಿಯುವುದಿಲ್ಲವೆ ?

ದೇವಿಯ ಕಿವಿಯಲ್ಲಿ ಎರಡು ಓಲೆಗಳಿವೆ : ಅವು ಅವಳ ಹೊಳೆಹೊಳೆಯುವ ಗಲ್ಲಗಳಲ್ಲಿ ಪ್ರತಿಫಲಿಸುವುದರಿಂದ ನಾಲ್ಕು ಓಲೆಗಳಾದಂತಾಯಿತು. ಒಂದೊಂದು ಓಲೆಯೂ ಚಕ್ರದಂತಿದೆ. ಆದ್ದರಿಂದ ದೇವಿಯ ಮುಖವನ್ನು ನಾಲ್ಕು ಚಕ್ರಗಳುಳ್ಳ ಮನ್ಮಥ ರಥವೆಂದು ಕಲ್ಪಿಸಿಕೊಳ್ಳುತ್ತಾರೆ ಶಂಕರರು. ಮನ್ಮಥ ಈ ರಥವನ್ನೇರಿ ತ್ರಿಪುರ ಸಂಹಾರಿಯನ್ನೆ ಎದುರಿಸುತ್ತಾನೆ, ಸೋಲಿಸಿಯೂ ಬಿಡುತ್ತಾನೆ !—

ಮಿರುಗುಗಲ್ಲದಲಿ ಬಿಂಬಿಸಿರುವಂಥ ಓಲೆಯೆರಡ ತಳೆದ
ನಿನ್ನ ಮುಖವಿದನು ನಾಲ್ಕು ಚಕ್ರಗಳ ಮನ್ಮಥನ ವರೂಥ
ಎನುವೆನಿದನೇರಿ ಮಾರವೀರ, ರವಿ ಶಶಿಯ ಗಾಲಿಗೊಂಡು
ಅವನಿರಥವಡರಿ ಬರುವ ಪ್ರಮಥವಲ್ಲಭನನೆದುರಿಸುವನು !

ಅಪೂರ್ವವಾದ ಕಲ್ಪನೆಯಿದು, ಚಮತ್ಕಾರದ ಅಂಶವಿದ್ದರೂ ಕೂಡ.

ಶಿವೆಯ ಗಲ್ಲ ಎಣೆಯಿಲ್ಲದ್ದು. ಅದು ತಂದೆಯಾದ ಹಿಮವಂತನಿಗೆ ವಾತ್ಸಲ್ಯದ ಅನುಭವವನ್ನು, ಪತಿಯಾದ ಈಶ್ವರನಿಗೆ ಶೃಂಗಾರದ ಅನುಭವವನ್ನು ತಂದುಕೊಟ್ಟದ್ದು :

ವಾತ್ಸಲ್ಯದಿಂದ ಗಿರಿರಾಜ ತನ್ನ ಬೆರಳಿನಲಿ ಮುಟ್ಟಿದಂಥ,
ಮತ್ತೆ ಮತ್ತೆ ಶಿವ ಅಧರಪಾನ ಕಾತರದೊಳೆತ್ತಿದಂಥ,
ಶಂಭುವಿನ ಕೈಯೊಳಿರುವ ಕನ್ನಡಿಯ ಹಿಡಿಯಿವೆನಿಪ ನಿನ್ನ
ಎಣೆಯೆ ಇಲ್ಲದೀ ಗಲ್ಲವನು ಶಿವೆಯೆ ಎಂತು ಹೊಗಳಲಮ್ಮ !

ಈಗ ದೇವಿಯ ಕುಚಯುಗವನ್ನು ವರ್ಣಿಸುತ್ತಾರೆ ಶಂಕರಾಚಾರ್ಯರು. ಪ್ರಾಯಃ ಅವರ ವರ್ಣನೆಗಳಲ್ಲೆಲ್ಲಾ ಈ ಭಾಗ ಅತ್ಯುತ್ಕೃಷ್ಟವಾದುದು. ಸಾಮಾನ್ಯವಾಗಿ ಹೆಣ್ಣಿನ ಕುಚಗಳನ್ನು ಜಘನ್ಯ ಶೃಂಗಾರ ಪರಿಕರವನ್ನಾಗಿ

ಮಾಡಿ ವರ್ಣಿಸಿದ ಕವಿಗಳೆ ನಮ್ಮಲ್ಲಿ ಬಹಳ ಮಂದಿ; ವಾಸ್ತವವಾಗಿ ಅವು ತಾಯ್ತನದ ಪ್ರತೀಕಗಳು. ಈ ದೃಷ್ಟಿಯಿಂದ ಕುಚಗಳನ್ನು ಕಂಡ ಕವಿಗಳು ಬಹಳ ವಿರಳ. ಶಂಕರಾಚಾರ್ಯರದು ಈ ವಿರಳ ಶ್ರೇಣಿ. ಗಣಪತಿ ಷಣ್ಮುಖರು ಹಾಲು ಕುಡಿಯುವ ದೃಶ್ಯವನ್ನು ಅವರು ನಮಗೆ ಕಾಣಿಸುತ್ತಾರೆ; ಆ ಮಕ್ಕಳು ಹಾಲೀಂಟುವಾಗ ತಾವೂ ಒಂದು ಮಗುವಾಗಿ ಆ ಸ್ತನಗಳನ್ನು ಪರಿಭಾವಿಸುತ್ತಾರೆ. ತಾಯಿ ಮಕ್ಕಳಿಗೆ ಹಾಲೂಡುತ್ತಿರುವಾಗ ಅವಳ ಸ್ತನಗಳನ್ನು ಯಾರೂ ನೋಡಬಹುದು, ಚಿತ್ತಚಾಂಚಲ್ಯಕ್ಕೆ ಪಕ್ಕಾಗದೆ ನೋಡಬಹುದು. ಆ ಮಾತೆಯೂ ಲಜ್ಜಿತಳಾಗುವುದಿಲ್ಲ; ನೋಡುವ ಕಣ್ಣೂ ಕಲುಷಿತವಾಗುವುದಿಲ್ಲ. ಆ ಪರಿಸರದಲ್ಲಿ ಮಾತೃತ್ವವೊಂದೆ ಪ್ರಧಾನವಾಗಿರುತ್ತದೆ; ಶೃಂಗಾರಕ್ಕೆ ಸ್ಥಾನವೇ ಇರುವುದಿಲ್ಲ. ಆ ಜಗಜ್ಜನನಿಯ ಸ್ತನಗಳು ತಮ್ಮ ಮನೋಜಾಡ್ಯವನ್ನು ಪರಿಹರಿಸಲೆಂದು ಪ್ರಾರ್ಥಿಸುತ್ತಾರೆ ಆಚಾರ್ಯರು :

> ಗಣಪ ಷಣ್ಮುಖರು ಕುಡಿದ, ಹಾಲು ಎಡೆಬಿಡದೆ ಸುರಿವ ನಿನ್ನ
> ಮೊಲೆಗಳೆಲೆ ತಾಯೆ ಕಳೆದು ಬಿಸುಡಲೌ ನನ್ನ ಮನಸಿನಳಲ :
> ಅವನು ನೋಡಿ ಹೇರಂಬ ತನ್ನ ಕುಂಭಗಳ ತಡವಿ ತಡವಿ
> ನೋಡಿಕೊಳ್ಳುವನು ಬೇಗ ಬೇಗ ಶಂಕೆಯಲಿ, ನಗೆಯ ಬರಿಸಿ !

ಗಣಪತಿ ಕರಿಕುಂಭಗಳಂತಿರುವ ಮಾತೆಯ ಸ್ತನಗಳನ್ನು ನೋಡಿ ತನ್ನ ಕುಂಭಗಳು ಎಲ್ಲಿ ಹೋದುವೋ ಎಂದು ಗಾಬರಿಯಿಂದ ಮುಟ್ಟಿ ನೋಡಿಕೊಂಡನಂತೆ ! ಅವನ ಗಾಬರಿಯನ್ನು ಕಂಡು ತಾಯಿತಂದೆಗೆ ನಗು !

ಪಾರ್ವತಿಯ ಸ್ತನಗಳು ಅಮೃತ ರಸದ ಮಾಣಿಕ್ಯ ಕುಂಭಗಳೆಂದೇ ಶಂಕರಾಚಾರ್ಯರ ನಂಬಿಕೆ :

> ನಿನ್ನ ಮೊಲೆಗಳಿವು ಅಮೃತ ರಸದ ಮಾಣಿಕ್ಯ ಕುಂಭವೆಂದು
> ತಿಳಿವೆನಗರಾಜ ಧ್ವಜನೆ, ಇದರೊಳೆನಗಿಲ್ಲ ಶಂಕೆಯಿನಿಸು !—
> ಉಂಟುತದನು ಆ ದ್ವಿರದವದನ ಷಣ್ಮುಖರು ಇಂದಿಗೂನು
> ಹೆಣ್ಣ ಕೂಟವರಿಯದ ಕುಮಾರರಾಗಿಯೇ ಉಳಿದಿರುವರು !

ತಾವು ಕುಡಿದುದು ಅಮೃತ ರಸವಾದುದರಿಂದಲೇ ಗಣಪಷಣ್ಮುಖರು ಚಿರಕುಮಾರರಾಗಿ, ಜರಾಮರಣರಹಿತರಾಗಿ ಉಳಿದಿದ್ದಾರೆ. ಆ ಅಮೃತರಸದ ಮಾಧುರ್ಯ ಎಂಥದೆಂದರೆ, ಸ್ತ್ರೀಸಂಗದಿಂದ ಬರುವ ಸುಖ ಅದರ ಮುಂದೆ

ಕ್ಷುಲ್ಲಕ. ಎಂತಲೇ ಗಣಪ ಷಣ್ಮುಖರು ಬಾಲ ಬ್ರಹ್ಮಚಾರಿಗಳಾಗಿಯೆ ಉಳಿದಿದ್ದಾರೆ. ಇತರ ದೇವತೆಗಳೆಲ್ಲ ಅಪ್ಸರೆಯರ ಕೂಟಕ್ಕೆ ಕಾತರರಾಗಿರುವಾಗ, ಇವರು ಮಾತ್ರ ನಿಶ್ಚಿಂತರಾಗಿ ಅಮ್ಮನ ಹತ್ತಿರ ಆಡಿಕೊಂಡಿದ್ದಾರೆ! ಅವಳ ಹಾಲಿನ ಮಹಿಮೆ ಅಂಥದು! ಇದು ನಿಸ್ಸಂದೇಹವಾಗಿ ಅತ್ಯಂತ ವಿಶಿಷ್ಟವಾದ ಚೇತೋಹಾರಿಯಾದ ಕಲ್ಪನೆ; ಅಸಾಧಾರಣ ಪ್ರತಿಭೆಗೆ ಮಾತ್ರ ನಿಲುಕತಕ್ಕದ್ದು.

ದೇವಿಯ ಎದೆಯಿಂದುಣ್ಮಿದ ಮೊಲೆವಾಲಿನ ಕಡಲನ್ನು ಸರಸ್ವತಿಯ ಸ್ವರೂಪವೆಂದು ಭಾವಿಸುತ್ತಾರೆ ಆಚಾರ್ಯರು. ಅದನ್ನು ಕುಡಿದು 'ದ್ರವಿಡ ಶಿಶು' ಪ್ರೌಢಕವಿಪಂಕ್ತಿಯಲ್ಲಿ ಕಮನೀಯ ಕವಿಯಾಗಿ ಪರಿಣಮಿಸಿದನೆಂದು ಹೇಳುತ್ತಾರೆ. ಇಲ್ಲಿ 'ದ್ರವಿಡಶಿಶು' ಮತ್ತಾರೂ ಆಗಿರದೆ, ಸ್ವಯಂ ಶಂಕರಾಚಾರ್ಯರೆ ಆಗಿದ್ದಾರೆ! ಅವರಿಗೆ ಕಾವ್ಯ ರಚನಾ ಶಕ್ತಿ ಬಂದದ್ದು ಜಗನ್ಮಾತೆಯ ಕೃಪಾಸ್ತನ್ಯ ಪಾನದಿಂದ!

ಇನ್ನು ದೇವಿಯ ರೋಮರಾಜಿಯನ್ನು ವರ್ಣಿಸುವಲ್ಲಿ ಆಚಾರ್ಯರ ಮನೋಜ್ಞವಾದ ಚಮತ್ಕೃತಿ ಎದ್ದು ಕಾಣುತ್ತದೆ:

ಹರನ ಕೋಪದ ಜ್ವಾಲೆಗಳು ಸುತ್ತಿ ಮುತ್ತಿಕೊಳಲು ಮಪುವ,
ನಿನ್ನ ಆಳವಹ ನಾಭಿಸರಸಿಯಲಿ ಮದನ ಮುಳುಗಿಕೊಂಡ!—
ಧೂಮಲೇಖೆಯದರಿಂದ ಮೇಲೆದ್ದಿತದನೆ, ಗಿರಿತನೂಜೆ,
ನಿನ್ನ ರೋಮಗಳ ರಾಜಿಯೆಂದು ತಿಳಿಯುವರು ಜನರು ತಾಯೆ!

ಕುಚಗಳು ಒತ್ತಿದುದರಿಂದ ವ್ಯೋಮವೆ ಕಿರಿದಾಗಿ ನಾಭಿ ಕುಹರಿಣಿಯನ್ನು ಹೊಗುತ್ತಿದೆಯೋ ಎನ್ನುವಂತೆ ತೋರುತ್ತಿದೆ ಆ ರೋಮಾವಳಿ ಎನ್ನುವಲ್ಲಿ ಕಲ್ಪನೆ ಭವ್ಯತಾಸಂಸ್ಪರ್ಶಿಯಾಗುವುದನ್ನು ನೋಡುತ್ತೇವೆ. ದೇವಿಯ ನಾಭಿಯನ್ನು ಆಚಾರ್ಯರು "ಮದನ ತೇಜೋಗ್ನಿಗಿದು ಹೋಮಕುಂಡ, ರತಿಯ ಆಡುದಾಣ" ಎಂದು ಚಿತ್ರಿಸುತ್ತಾರೆ.

ರುದ್ರನನ್ನು ಗೆಲ್ಲಲೋಸುಗ ಮನ್ಮಥ ಮಾಡಿರುವ ಎರಡು ಬತ್ತಳಿಕೆಗಳಂತಿವೆ ದೇವಿಯ ಮೀನಖಂಡಗಳು ಎನ್ನುತ್ತಾರೆ ಆಚಾರ್ಯರು. ಅವುಗಳ ತುದಿಯಲ್ಲಿ ಉಗುರಿನ ರೂಪದ ಬಾಣಗಳಿವೆ—ಅವು ನಿತ್ಯ ನಮಸ್ಕರಿಸುವ ಸುರಕಿರೀಟಗಳ ಸಾಣೆಯಿಂದ ಹರಿತವಾಗಿವೆ.

ಆದಿಶಕ್ತಿಯ ಪಾದ ತೊಳೆದ ನೀರನ್ನು ತಾವು ಅನವರತ ಕುಡಿಯು ವುದಾಗಿ ದೈನ್ಯಭಾವದಿಂದ ಹೇಳುತ್ತಾರೆ ಆಚಾರ್ಯರು; ಅದು ಬರಿಯ ನೀರಲ್ಲ, ಸರಸ್ವತಿಯ ತಾಂಬೂಲರಸ :

ದೇವಿ, ಅಲತಿಗೆಯು ಬೆರೆತ ನಿನ್ನ ಪಾದಾಭಿಷೇಕ ಜಲವ
ಕುಡಿವೆ ವಿದ್ಯಾರ್ಥಿಯಾದ ನಾನು ಹೇ ಜನನಿ ಸರ್ವಕಾಲ !
ಸಹಜ ಮೂಕರನು ಕೂಡ ಕವಿಗಳಾಗಿಸುವ ತೀರ್ಥವಿದುವು
ಸರಸ್ವತಿಯ ಮುಖ ಕಮಲ ತಾಂಬೂಲ ರಸವೆ ಆಗಿರುವುದು !

ಮಹಾಜ್ಞಾನಿಯಾದರೂ ತಾವಿನ್ನೂ ವಿದ್ಯಾರ್ಥಿಯೆಂದು ಹೇಳಿಕೊಳ್ಳುವ ಶಂಕರಾಚಾರ್ಯರ ವಿನಯ ಅನುಕರಣೀಯವಾದುದು. ಆ ಜನನಿಯ ಮುಂದೆ ಎಲ್ಲರೂ ವಿದ್ಯಾರ್ಥಿಗಳೇ, ಅಜ್ಞರೇ ! ಅವಳು ಒಲಿದರೆ ವಿದ್ಯೆ, ಇಲ್ಲವೋ ಅಜ್ಞಾನದ ನಿದ್ದೆ.

ಶ್ರೀದೇವಿಯ ಚರಣಾರವಿಂದದಲ್ಲಿ ಶಂಕರಾಚಾರ್ಯರು ಭ್ರಮರಭಾವ ದಿಂದ ವಿರಮಿಸಬಯಸುತ್ತಾರೆ. ಹಾಗಾದಾಗ ಬದುಕು ಸಾರ್ಥಕ, ಪರಿ ಪೂರ್ಣ, ಸಂತೃಪ್ತ !—

ದೀನಜನ ಬಯಸುವೆಲ್ಲ ಸಿರಿಗಳನು ನಿಚ್ಚ ನೀಡುವಂಥ
ಸಾಂದ್ರ ಸೌಂದರ್ಯ ಪ್ರಕರ ಮಕರಂದ ರಸವ ಸೂಸುವಂಥ
ದಿವ್ಯ ಮಂದಾರ ಮಂಜರಿಯ ಸೊಬಗ ತಾಳಿಕೊಂಡು ನಿಂತ
ನಿನ್ನ ಚರಣದಲಿ ಮುಳುಗಿ ಜೀವವಿದು ತುಂಬಿಯಾಗಲವ್ವ !

ಜಗದ್ಧಾತ್ರಿಯ ಶೃಂಗಾರ ಪ್ರಸಾಧನಗಳ ಒಂದು ಅದ್ಭುತ ಚಿತ್ರವನ್ನು ಕೊಡುತ್ತಾರೆ ಶಂಕರರು. ಚಂದ್ರಮಂಡಲವೆ ಅವಳ ಕರಡಿಗೆ; ಅದರಲ್ಲಿವೆ ಅವಳ ಪರಿಕರಗಳು; ಆ ಕರಡಿಗೆಯನ್ನು ಅವಳು ಭೋಗದಿಂದ ಬರಿದು ಮಾಡುತ್ತಲೆ ಇರುತ್ತಾಳೆ, ಬ್ರಹ್ಮ ಅದನ್ನು ಮತ್ತೆ ಮತ್ತೆ ತುಂಬುತ್ತಲೇ ಇರುತ್ತಾನೆ :

ಆ ಕಲಂಕ ಕಸ್ತೂರಿಯಹುದು, ಪನ್ನೀರು ಚಂದ್ರಬಿಂಬ,
ಕಪ್ಪುರಗಳು ಹದಿನಾರು ಕಲೆಗಳೀ ತೆರದಿ ತುಂಬಿ ನಿಂದ
ಇಂದುಮಂಡಲದ ಪಚ್ಚೆಕರಡಿಗೆಯು ನೀನು ಭೋಗದಿಂದ
ಬರಿದುಗೊಳಿಸಲದ ನಿಚ್ಚ ತುಂಬುವನು ಮರಳಿ ಮರಳಿ ಬ್ರಹ್ಮ !

ಚಂದ್ರನ ಕ್ಷಯ-ವೃದ್ಧಿಗಳಿಗೆ ನವೀನ ರೀತಿಯಲ್ಲಿ ಕಾರಣ ಹೇಳಿದ್ದಾರೆ ಆಚಾರ್ಯರು.

ರವಿಗೆ ಅವನ ಕಿರಣಗಳಿಂದಲೆ ಆರತಿ ಬೆಳಗುವಂತೆ, ಶಶಿಗೆ ಅದರ ಜಲಕಣಗಳಿಂದಲೆ ಅರ್ಘ್ಯವೆತ್ತುವಂತೆ, ಜಲಧಿಗೆ ಅದರ ಜಲದಿಂದಲೆ ತರ್ಪಣ ನೀಡುವಂತೆ ತಾನು ದೇವಿಯನ್ನು ಅವಳ ನುಡಿಗಡಣದಿಂದಲೆ ಸ್ತುತಿಸುತ್ತಿದ್ದೇನೆಂದು ನಮ್ರತೆಯಿಂದ ಹೇಳಿ ಈ ಸ್ತೋತ್ರವನ್ನು ಸಮಾಪ್ತಿಗೊಳಿಸುತ್ತಾರೆ ಶಂಕರಾಚಾರ್ಯರು.

ಹೀಗೆ ಈ ದೇವೀಸ್ತವನದಲ್ಲಿ ರಸಭಾವಗಳಿವೆ, ಶಬ್ದಾರ್ಥಾಲಂಕಾರಗಳಿವೆ, ಕವಿಸಮಯ ಚಮತ್ಕಾರಗಳಿವೆ, ಹೃದ್ಯವಾದ ಶೈಲಿಯಿದೆ-ಒಟ್ಟಿನಲ್ಲಿ ಕಾವ್ಯವಿದೆ, ಮಿಗಿಲಾಗಿ ದರ್ಶನವಿದೆ. ಇದರಿಂದ ಆನಂದ ಲಾಭವೂ ಉಂಟು, ಶಿವೇತರ ಕ್ಷಯವೂ ಉಂಟು.

ಕನ್ನಡ ಸೌಂದರ್ಯಲಹರಿ

ಕನ್ನಡ ಸೌಂದರ್ಯಲಹರಿ

ಶಿವನು ಶಕ್ತಿಯೊಡಗೂಡಿ ಮಾತ್ರ ಲೋಕವನು ಸೃಜಿಸಬಲ್ಲ:
ಅಲ್ಲದಿರಲಂತು, ದೇವನಿವಹವಲುಗಾಡಲಾರದಲ್ಲ!
ಎಂದಮೇಲೆ, ಹರಿ ಹರ ವಿರಿಂಚಿಗಳ ಪೂಜೆ ಕೊಳುವ ನಿನ್ನ
ನಮನ ಸ್ತವನಗಳು ಪುಣ್ಯಮಾಡದವಗೆಂತು ಸಾಧ್ಯವಮ್ಮ? ೧

ನಿನ್ನ ಪಾದಪಂಕಜದ ಹುಡಿಯೊಳೊಂದಣುವನಷ್ಟೆ ತೆಗೆದು,
ವಿಫಲಗೊಳ್ಳದೀ ಲೋಕಸಂಕುಲವ ಬೊಮ್ಮ ವಿರಚಿಸುವನು!
ಶಿರದಿ ಹೊತ್ತು ಹರಿ ಹೊರೆವನೆಂತೊ ಬಹು ಪರಿಗಳಿಂದಲಿದನು;
ಹರನೊ ಮೆರೆವನಿದ ದೂಳಿಗೈದು ಬೂದಿಯನು ಬಳಿದುಕೊಂಡು! ೨

ಚರಣರಜವಿದಜ್ಞಾನಿಹೃದಯತಿಮಿರವನು ಕಳೆವ ದಿನಪ;
ಜಡರಿಗಿದುವೆ ಚೈತನ್ಯದೊಂದು ಮಕರಂದಭರಿತ ಸ್ತಬಕ;
ಇದು ದರಿದ್ರಜನವೃಂದಕಹುದು ಚಿಂತ್ಯಾಮಣಿಯ ಮಾಲೆ;
ಜನ್ಮಜಲಧಿಯಲಿ ಮುಳುಗಿಹೋದವರಿಗಿದು ವರಾಹದಾಡೆ! ೩

ನಿನ್ನನುಳಿದನ್ಯ ದೇವಗಣವೆಲ್ಲ ಅಭಯಹಸ್ತ ನೆಗಹಿ
ವರವನೀವ ನಾಟಕವ ಗೈವುದಂತಲ್ಲ ನೀನು, ದೇವಿ!
ಲೋಕಗಳನು ಭಯದಿಂದ ಕಾದು, ಬಯಸಿದ್ದಕಿಂತ ಮಿಗಿಲು
ಫಲವ ಕೊಡುವುದಕೆ, ಹೇ ಶರಣ್ಯೆ, ನಿನ್ನೆರಡು ಚರಣ ಸಾಕು! ೪

ಪ್ರಣತಜನಕೆ ಸೌಭಾಗ್ಯವೀವ ನಿನಗೆಸಗಿ ಅರ್ಚನೆಗಳ,
ಹಿಂದೆ ಹೆಣ್ಣಾಗಿ ಹರಿ ಪುರಾರಿಯನು ಕೂಡ ಮರುಳುಗೈದ!
ರತಿಯ ಕಂಗಳಿಗೆ ಮಾತ್ರ ಗೋಚರಿಪ ದೇಹ ಪಡೆದ ಮದನ
ನಿನಗೆ ನಮಿಸಿ, ಕೆಡಹುವನು ಮೋಹಜಾಲದಿ ಮುನೀಂದ್ರಗಣವ! ೫

ಕುಸುಮಕೋದಂಡ, ದುಂಬಿಗಳ ನಾರಿ, ಪಂಚಪುಷ್ಪಬಾಣ,
ಆ ವಸಂತ ಸಾಮಂತ, ಮಲಯಮಾರುತನೆ ರಣವರೂಥ-
ಆದರೂನು ಏಕಾಕಿಯಾಗಿ ಜಯಿಸುವನನಂಗ ಜಗವ:
ಹೇ ಹಿಮಾದ್ರಿಸುತೆ, ತಳೆದು ನಿನ್ನ ಕಡೆಗಣ್ಣನೊಂದು ಕೃಪೆಯ!

ಗೆಜ್ಜೆ ಘಲಿರೆನುವ ಡಾಬು, ಕರಿಕಲಭಕುಂಭಸಮಪಯೋಜ,
ತೆಳ್ಳಿತಾದ ನಡು, ಪೂರ್ಣ ಶಾರದೇಂದುವಿನ ತೆರದ ವದನ,
ಬಿಲ್ಲು ಬಾಣಗಳ ಪಾಶವಂಕುಶವ ಧರಿಸಿ ಮೆರೆವ ಹಸ್ತ-
ಇಂತು ಪುರಹರಗು ಬೆರಗನೀವಳಿರಲೆನ್ನ ಮುಂದೆ ನಿತ್ಯ!

ಸೊನೆಯ ಕಡಲ ನಡುವಿರುವ, ಸುರವಿಟಪಿವಾಟಿ ಸುತ್ತುವರಿದ
ಮಣಿಯ ದ್ವೀಪದಲಿ ನೀಪದುಪವನದಿ ಚಿಂತಾಮಣಿಯ ಗೃಹದ
ಶಿವಾಕಾರಮಂಚದಲಿ ಪರಮಶಿವತಲ್ಪನಿಲಯೆಯೆನಿಪ
ಚಿದಾನಂದಲಹರಿಯೇ, ನಿನ್ನ ಭಜಿಸುವರೆ ಧನ್ಯರಮ್ಮ!

ಮೂಲಚಕ್ರದಲಿ ಭೂಮಿತತ್ತ್ವ, ಮಣಿಪೂರದೊಳಾಪತತ್ತ್ವ,
ಸ್ವಾಧಿಷ್ಠಾನದಲಿ ತೇಜ ಮೇಣನಾಹತದಿ ವಾಯುತತ್ತ್ವ,
ಆ ವಿಶುದ್ಧಿಯಾಕಾಶ, ಮೇಲೆ ಮನ-ಇವನು ನೀನು ಮೀರಿ
ಸಹಸ್ರಾರದಲಿ ರಮಿಸುತಿರುವೆ ಪತಿಯೊಡನೆ ಗುಪ್ತವಾಗಿ!

ನಿನ್ನ ಚರಣಯುಗದಿಂದ ಸುರಿವ ಸೊನೆವಳೆಯ ಧಾರೆಯಿಂದ
ತನುವನೆಲ್ಲ ತೋಯಿಸುತ ಚಂದ್ರನಾಡಿಯಲಿ ಹರಿದು ಪುನಃ
ನಿನ್ನ ನೆಲೆಗೈದಿ ಸರ್ಪದಂದದಲಿ ಸುರುಳಿ ಸುತ್ತಿಕೊಂಡು
ನಿದ್ರೆಗೈವೆಯಹ ತಾಯಿ ಕುಲಕುಂಡ ಕುಹರದಲ್ಲಿ ನೀನು!

ನಿನ್ನ ಚೆಲುವಿಗೆಲೆ ಗಿರಿತನೂಜೆ ಹೋಲಿಕೆಯ ಸೃಜಿಸಲೆಂದು
ಬಯಸಿ ಬ್ರಹ್ಮ. ಕವಿವರ್ಯರೆಲ್ಲ ಪಡೆಯುವರು ವಿಫಲತೆಯನು!
ನೋಡಿ ನಿನ್ನ ಚೆಲುವಿಕೆಯನಮರಲಲನೆಯರು ಕಾತರದೊಳು
ತಪಸಃ ಸಿಗದಂಥ ಶಿವನ ಸಾಯುಜ್ಯಪದವಿಗೆಳಸುತಿಹರು!

ಕಣ್ಣು ಕಳೆದಂಥ ರಾಗವಿಳಿದಂಥ ಮುದುಕನಿದೆಗೆ ನೀನು
ಹರಿಸಿದರೆ ಕಟಾಕ್ಷವನು, ಅವನ ಬೆನ್ನಿನಲಿ ನೂರು ನೂರು
ಹರಯದಂಗನೆಯರೋಡಿ ಬರುವರು-ಮುಡಿ ಸಡಿಲಿ, ಕಲಶಕುಚದ
ವಸ್ತ್ರಗಳು ಜಾರಿ, ಕಾಂಚಿಗಳು ಹರಿ, ಕಳಚಿಬಿದ್ದು ದುಕೂಲ! ೧೨

ಶರಚ್ಚಂದ್ರಶುಭ್ರೆ ನೀನು, ಶಶಿಜಟಾಜೂಟಮಕುಟೆ,
ವರದಹಸ್ತೆ ಭೀತಾಭಯಹಸ್ತೆ ನೀ ಪುಸ್ತಕಾಕ್ಷ ಹಸ್ತೆ:
ನಿನ್ನನೊಮ್ಮೆ ನಮಿಸಿದರೆ ಸಾಕು, ಹಾಲ್ಜೇನು ದ್ರಾಕ್ಷೆಯಂಥ
ಮಧುರ ಪದದ ಸತ್ಪ್ರಯೋಗದೊಡನೆ ಬೆರೆಯುವನು ನಿನ್ನ ಭಕ್ತ! ೧೩

ನೀ ಕವೀಂದ್ರ ಹೃತ್ಕಮಲವನಕೆ ಬಾಲಾರ್ಕ ದೀಪ್ತಿಯಂತಿರುವೆ;
ಅರುಣವರ್ಣೆಯಹ ನಿನ್ನ ಭಜಿಸಿದ ಕೆಲರು ಪುಣ್ಯಧನರು
ಶಾರದೋದ್ಭೂತ ಶೃಂಗಾರಲಹರಿಗಂಭೀರವಚನ-
ರಚನೆಯಿಂದ ರಂಜಿಸುವರಮ್ಮ ಸೂರಿಗಳು ನೆರೆದ ಸಭೆಯ! ೧೪

ವಾಕ್ಕುಗಳನೀವ, ಚಂದ್ರಮಣಿಶಿಲಾಕಾಂತಿಯಿಂದ ಮೆರೆವ
ವಶಿನಿ ಮೊದಲಾದ ಶಕ್ತಿಗಳ ಕೂಡಿ ನಲಿವ ನಿನ್ನ ನೆನೆವ
ಜನರು, ಜನನಿ, ಶಾರದೆಯ ವದನವಾರಿಜದ ಸುರಭಿಯಾಂತ
ಮಧುರವಚನದಲಿ ಕಾವ್ಯ ರಚಿಸುವರು ಮಹಾಕವಿಗಳಂದ! ೧೫

ತರುಣತರಣಿಕಿರಣಗಳ ತೆರದ ತನುದೀಪ್ತಕಾಂತಿಯಿಂದ
ಭೂದಿವ್ಯಪೃಥ್ವಿಗಳು ಅರುಣದೀಪ್ತಿಯಲಿ ಮುಳುಗಿ ಮಿಂದಿಹುದ
ನೆನೆವ ಜನಕೆ ನವಹರಿಣತರಳ ನೇತ್ರಗಳ ಅಪ್ಸರೆಯರು
ಯಾರು ತಾನೆ ಊರ್ವಶಿಯು ಸಹಿತ ವಶರಾಗಿ ಬಾರದಿಹರು? ೧೬

ಒಂದು ಬಿಂದು ಮಾಡುವದರ ಕೆಳಗೆ ಸ್ತನಯುಗಳಿ, ಮತ್ತೆ ತಳೆ
ಈಶ್ವರಾರ್ಧನೀ ತೆರದಿ ನಿನ್ನ ಸ್ಮರಕಲೆಯ ಸ್ಮರಿಸುವವನು
ಲಲನೆಯರನು ಒಲಿಸುವನು ದೇವಿ- ಈ ಸಿದ್ಧಿ ಯಾವ ಗಹನ?
ಗೆಲ್ಲಬಲ್ಲನವ ಸೂರ್ಯಚಂದ್ರ ಕುಚವುಳ್ಳ ಮೂರು ಜಗವ! ೧೭

ಸುಧೆಯ ರಸವನಂಗಾಂಗಗಳಲಿ ಸುರಿವಂಥ ಚಂದ್ರಕಾಂತ-
ಶಿಲೆಯ ಪುತ್ಥಳಿಯಿದೆಂದು ಹೃದಯದೊಳು ನಿನ್ನ ನೆನೆವ ಭಕ್ತ
ಸರ್ಪದರ್ಪವನು ನೋಟದಿಂದ ಶಮಿಸುವನು ಗರುಡನಂದ;
ಸೌಖ್ಯಗೊಳಿಸುವನು ಜ್ವರನಿಪೀಡಿತರನಮೃತನಾಡಿಯಿಂದ! ೧೮

ಆರು ಚಕ್ರಗಳ ಮೀರಿ ಮೇಲಿರುವ ಸಹಸ್ರಾರದಲ್ಲಿ
ಬಳ್ಳಿ ಮಿಂಚಿನೊಲು ಹೊಳೆವ, ಸೂರ್ಯಚಂದ್ರಾಗ್ನಿಮಯವದೆನಿಪ
ನಿನ್ನ ಸಾದಾಖ್ಯ ಕಲೆಯ ಕಂಡು, ಮಲಮಾಯೆ ಕಳೆದ ಮನದ
ಯೋಗಿಜನರು ತಾಳುವರು ಪರಮ ಆಹ್ಲಾದಲಹರಿಪದವ! ೧೯

'ಎಲೆ ಭವಾನಿ, ನಾ ನಿನ್ನ ದಾಸ-ಕೃಪೆಯಿಂದ ನನ್ನ ನೋಡು'
ಎಂದು ಸ್ತೋತ್ರಿಸಲು ಬಯಸುವಂಥವನು 'ಎಲೆ ಭವಾನಿ' ಎಂದು
ನುಡಿಯುವಷ್ಟರೊಳೆ ಆ ಮುಕುಂದ ಬ್ರಹ್ಮೇಂದ್ರ ಮಕುಟಚಯದ
ಆರತಿಯ ಕೊಳುವ ನಿನ್ನ ಸಾಯುಜ್ಯಪದವ ಕೊಡುವೆಯಲ್ಲ! ೨೦

ಶಿವನ ವಾಮದೇಹಾರ್ಧವನು ಕದ್ದು, ತೃಪ್ತಿಗೊಳದೆ ಮತ್ತೆ
ದಕ್ಷಿಣಾರ್ಧವನು ಕೂಡ ನೀನು ಕದ್ದಿರುವೆಯೆಂದು ಶಂಕೆ!
ಏಕೆ ಗೊತ್ತೆ? ನೀನರುಣವರ್ಣೆಯಹೆ, ನಿನಗೆ ಮೂರು ನೇತ್ರ,
ಕುಚಗಳೆರಡುಂಟು, ಕುಟಿಲಶಶಿಕಲೆಯ ಧರಿಸಿದಂಥ ಮಕುಟ! ೨೧

ಅಜನು ಸೃಜಿಸುವನು, ಹರಿಯು ಹೊರೆಯುವನು, ರುದ್ರನಳಿವನಿಳೆಯು;
ಈಶ ನಾಶಮಾಡುವನು ಇವರು ಮೂವರನು ತನ್ನ ಸಹಿತ!
ಬಳಿಕ ಆ ಸದಾಶಿವನೆ ನಿನ್ನ ಭ್ರೂಲತೆಯ ಚಲನೆಯಿಂದ
ಆಜ್ಞೆಗೊಂಡು ಇದನೆಲ್ಲ ಸೃಷ್ಟಿಗೈಯುವನು ಮೊದಲಿನಿಂದ! ೨೨

ಶಿವೆಯೆ, ನಿನ್ನ ಚರಣದಲಿ ಸಲ್ಲಿಸುವ ಪೂಜೆ ಮೂರು ಗುಣದಿ
ಹುಟ್ಟಿ ಬಂದಂಥ ಮೂರು ದೇವರಿಗೆ ಸಂದ ಪೂಜೆ ದಿಟದಿ!
ನಿನ್ನ ಪಾದಪದ್ಮಗಳ ಹೊತ್ತ ಮಣಿಪೀಠದೆಡೆಯೆ ನಿತ್ಯ
ಕೈಯ ಮುಗಿದುಕೊಂಡಿಹರು ಮಕುಟವಲಿ ಬ್ರಹ್ಮ ವಿಷ್ಣು ರುದ್ರ! ೨೩

ಆ ವಿರಿಂಚಿಗೊದಗುವುದು ಪಂಚತ್ವ, ಹರಿಗೆ ವಿರತಿಯಹುದು,
ನಾಶವಹನು ಕೀನಾಶ ಕೂಡ, ಧನದನಿಗೆ ನಿಧನವಹುದು;
ಮನುಮಹೇಂದ್ರಾದಿಗಳ ಸಮೂಹವಳಿಯುವುದು, ಸತಿಯೆ, ನಿನ್ನ
ಪತಿಯು ಮಾತ್ರ ಈ ಮಹಾಪ್ರಳಯದಲಿ ವಿಹರಿಸುವನು ನಿತ್ಯ! ೨೪

ನಿನಗೆ ನನ್ನನರ್ಪಿಸಿಹೆ: ನಿನ್ನ ಜಪ ನನ್ನ ಜಲ್ಪವೆಲ್ಲ;
ನನ್ನ ತಿರುಗಾಟ ನಿನಗೆ ಬಲವಂದ ಹಾಗೆ; ನನ್ನ ಊಟ
ನಿನಗೆ ಸಲುವಂಥ ಹವನ; ನನ್ನ ಮಲಗುವಿಕೆ ನಿನಗೆ ನಮನ-
ಹೀಗೆ ನನ್ನೆಲ್ಲ ಕರ್ಮವಿಲಸಿತವು ನಿನಗೆ ಪೂಜೆಯಮ್ಮ! ೨೫

ಇಂದ್ರ ಬ್ರಹ್ಮಾದಿ ದೇವಗಣವೆಲ್ಲ ಸುಧೆಯ ಕುಡಿದರೂನು
ವಿಶ್ವದಲ್ಲಿ ಪಡೆಯುವರು ಘೋರವಹ ಜರಾಮರಣಗಳನು!
ಭೀಕರತೆಯಾಂತ ಕಾಳಕೂಟವನು ಕುಡಿದರೂನು ಶಂಭು
ಅಳಿಯದಿಹನಿದಕೆ ಮೂಲ ನಿನ್ನ ಕಿವಿಯೋಲೆ ಮಹಿಮೆಯಹುದು! ೨೬

ಬ್ರಹ್ಮ ಹರಿ ಶಕ್ರ ನಿನಗೆ ಪ್ರಣತರಾಗಿರುವ ಸಮಯದಲ್ಲಿ,
ಹರನು ಮನೆಗೆ ಬರೆ ನೀನು ಬೇಗ ಇದಿರೆದ್ದು ಹೋಗುವಲ್ಲಿ,
'ಮುಂದುಗಡೆ ವಿಧಿಯ, ಹರಿಯ, ಸುರಪತಿಯ ಕಠಿಣ ಮಕುಟವುಂಟು;
ಎಡವೀಯೆ, ಜೋಕೆ!' ಎನುವಂಥ ಬಂಟರುಕ್ತಿಗಳು ಮೆರೆಯುತಿಹವು!
೨೭

ನಿನಗೆ ಶಂಭುವಿನ ದೇಹ; ಸ್ತನಯುಗಲವಹುದು ಸೂರ್ಯ ಚಂದ್ರ;
ತಿಳಿವೆ ನವತತ್ತ್ವಘಟಿತವೆಂದು ಈ ನಿನ್ನ ವಿಮಲ ರೂಪ!
ಉಭಯ ಸಾಧಾರಣತೆಯನಾಂತ, ಸಮರಸಪರಾನಂದಪರತೆ-
ಯಾಂತ ನಿಮ್ಮೊಳಗೆ ಮೇಲು-ಕೀಳುಗಳ ಬಗೆವೆನೆಂತು, ಮಾತೆ? ೨೮

ನೀನೆ ಮನವಹುದು, ನೀನೆ ವ್ಯೋಮವಹೆ, ನೀನೆ ವಾಯುತತ್ತ್ವ,
ಅನಲ ಜಲ ನೀನೆ, ಭೂತತ್ತ್ವ ನೀನೆ-ಮತ್ತೆ ಬೇರೆಯಿಲ್ಲ!
ವಿಶ್ವವಪುವಾಗಿ ಪರಿಣಮಿಸಲೆಂದು ನೀನೆ ತಾಳುತಿರುವೆ
ಚಿದಾನಂದರೂಪವನು ಮತ್ತೆ ಶಿವಯುವತಿಭಾವವನ್ನೆ! ೨೯

ಮಣಿರೂಪ ತಳೆದ ದ್ವಾದಶಾದಿತ್ಯರನ್ನು ಕೆತ್ತಿದಂಥ
ನಿನ್ನ ಹೊನ್ನ ಮಕುಟವನು, ಗಿರಿಜಾತೆ, ಕೀರ್ತಿಗೈಯುವಾತ
ರತ್ನಕಾಂತಿಯನ್ನಾಂತು ಹಲವು ಬಣ್ಣಗಳ ಮೆರೆವ ನಿನ್ನ
ನೊಸಲ ಚಂದ್ರಖಂಡವನು ಇಂದ್ರಧನುವೆಂದು ತಿಳಿಯದಿರನು! ೩೦

ನೀಲನೈದಿಲೆಯ ವನದ ತೆರದಿ ಮೃದುಸಾಂದ್ರಸ್ನಿಗ್ಧವೆನಿಪ
ನಿನ್ನ ಚಿಕುರನಿಕುರುಂಬ, ಹೇ ಶಿವೆಯೆ, ಕಳೆಯಲೆಮ್ಮ ತಮವ!
ನಿನ್ನ ತುರುಬಿನೊಳು ಸಹಜವಿರುವ ಸೌರಭವ ಕೊಳ್ಳಲೆಂದು
ಇಂದ್ರನಂದನದ ಕುಸುಮಸಮುದಾಯವೆಲ್ಲ ಅದರೊಳಿಹುದು! ೩೧

ನಿನ್ನ ಘನಕೇಶರಾಶಿಯೆಂದೆಂಬ ತಿಮಿರವೈರಿಗಳಿಗೆ
ಕೋಳುಹೋದ ಬಾಲಾರ್ಕಕಿರಣದೊಲು ತಳೆದು ಕುಂಕುಮವನು,
ವದನಸೌಂದರ್ಯಲಹರಿವಾಹಿನಿಯ ಸ್ರೋತಸರಣಿಯಂತೆ
ಮೆರೆವ ನಿನ್ನ ಬೈತಲೆಯ ಸರಣಿ ಕೊಡಲೆಮಗೆ ಶುಭವನಗಜೆ! ೩೨

ಸಹಜವಾಗಿ ಮರಿದುಂಬಿಯಂಥ ಮುಂಗುರುಳ ತಂಡದಿಂದ
ಸುತ್ತುಗೊಂಡಿರುವ ನಿನ್ನ ಮೊಗ ನಗುವುದಮ್ಮ ಕಮಲರುಚಿಯ!
ಮುಗುಳು ನಗೆಯು, ಸುಲಿಪಲ್ಲ ಕಾಂತಿಕೇಸರವು, ಸುರಭಿಯೊಗೆವ
ನಿನ್ನ ವದನಾಬ್ಜದಲ್ಲಿ ಸೊಕ್ಕುವುವು ಸ್ಮರಹರಾಕ್ಷಿಭೃಂಗ! ೩೩

ನಿನ್ನ ಲಾವಣ್ಯಕಾಂತಿವಿಮಲವಾದಂಥ ಹಣೆಯು, ಶಿವೆಯೆ,
ಮಕುಟಘಟಿತವಹ ಎರಡನೆಯ ಚಂದ್ರಶಕಲವೆಂದು ತಿಳಿವೆ!
ಉಭಯಖಂಡಗಳು ಮೇಲು ಕೆಳಗಾಗಿ ಹೇಗೊ ಒಂದುಗೂಡಿ
ಪರಿಣಮಿಸವಮೃತ ಕರೆವ ಪೂರ್ಣಹಿಮಕರನ ಬಿಂಬವಾಗಿ! ೩೪

ಭುವನಭಯಭಂಗವ್ಯಸನಿನಿಯೆ, ನಿನ್ನ ನಸುಕೊಂಕಿದಂಥ ಹುಬ್ಬು
ಮಧುಪರುಚಿಯ ಕಣ್ಣುಗಳ ಹೆದೆಯ ತಳೆದಂಥ ಮದನಧನುವು
ಎಂದು ತಿಳಿವೆನದನಾ ರತೀಶ ಎಡಕೈಯೊಳಾಂತು ಹಿಡಿಯೆ,
ಮುಷ್ಟಿ ಮುಂಗೈಯೊಳಡಗಿ ಕಾಣದಾಗಿಹುದು ಅದರ ನಡುವೆ! ೩೫

ನಿನ್ನ ಬಲಗಣ್ಣು ಸೂರ್ಯರೂಪಾಗಿ ಹಗಲ ವಿರಚಿಸುವುದು;
ನಿನ್ನ ಎಡಗಣ್ಣು ಚಂದ್ರರೂಪಾಗಿ ಇರುಳ ವಿರಚಿಸುವುದು;
ಹೇಮಪಂಕಜದ ಸೊಗದ ನಿನ್ನ ಮೂರನೆಯ ಕಣ್ಣು, ಗಿರಿಜೆ,
ಹಗಲು ಇರುಳುಗಳ ನಡುವೆಯಿರುವ ಸಂಜೆಯನು ರಚಿಸುವುದಲ್ತೆ! ೩೬

ನಿನ್ನ ನೋಟ ವಿಶಾಲ, ಕಲ್ಯಾಣ, ರುಚಿರ, ಕುಮುದಗಳಿಗೆ
ಶಾಸಯೋಗ್ಯವದು, ದಯೆಯ ಧಾರೆಗಾಧಾರ, ಮಧುರವೆಹುದು,
ಆಭೋಗವತಿಕ, ಅವಂತಿ, ಬಹುನಗರ ವಿಸ್ತಾರವಿಜಯ-
ಇಂತು ಒಂದೊಂದು ಹೆಸರಿನಿಂದ ವ್ಯವಹರಿಸಲಾಯ್ತು, ಯೋಗ್ಯ! ೩೭

ಕಾವ್ಯಕುಸುಮಮಂಜರಿಯ ಮಕರಂದರಸದ ರುಚಿಯ ಸವಿವ
ನಿನ್ನ ಕಿವಿಗಳನು, ಸತತ ನವರಸಾಸ್ವಾದಲೋಲವೆನಿಪ
ನಿನ್ನ ಕಡೆಗಣ್ಣ ಘಾಳವೆಂಬೆರಡು ಪರಿಮಳಿಯ ಕಂಡು
ಕರುಬಿನಿಂದ ನಸು ಕೆಚ್ಚಗಾಗಿಹುದು ನಿನ್ನ ನೊಸಲ ಕಣ್ಣು! ೩೮

ನಿನ್ನ ನೋಟ ಶಿವನಲ್ಲಿ ಶೃಂಗಾರಯುಕ್ತ, ಅನ್ಯರಲ್ಲಿ
ಬೀಭತ್ಸ, ಗಂಗೆಯಲಿ ರೌದ್ರ, ಗಿರಿಶನಯನದಲಿ ಅದ್ಭುತವತಿ,
ಹರನ ಹಾವಿನಲಿ ಭೀತ, ಕಮಲಸೌಭಾಗ್ಯವಿಜಯವೀರ,
ಸಖಿಯರಲಿ ಹಾಸ್ಯವಹುದು; ತಾಯೆ, ನಮ್ಮೊಳದು ಕರುಣಪೂರ್ಣ! ೩೯

ಕಿವಿಯವರೆಗಿರುವ, ಬಾಣಗಳ ಗರಿಯ ಹೋಲುವಂಥ ಎವೆಯ,
ತ್ರಿಪುರಹರನ ಮಾನಸದ ಶಾಂತರಸವನ್ನು ಕೆಡಿಸಿದಂಥ
ನಿನ್ನ ಕಣ್ಣುಗಳು, ಹೇ ಹಿಮಾಲಯನ ಕುಲದ ತೊಡವೆ ಶಿವೆಯೆ,
ಕಿವಿಯವರೆಗೆಳೆದ ಸ್ಮರನ ಶರವಿಲಾಸವನು ಮೀರಿಯುತಿಹವೆ! ೪೦

ಈಶಾನದಯಿತೆ, ನೀ ಲೀಲೆಯಿಂದ ಕಾಡಿಗೆಯ ಹಚ್ಚಿಕೊಳಲು,
ಮೂರು ಬಣ್ಣಗಳ ತಾಳಿಕೊಂಡಿರುವ ನಿನ್ನ ಮೂರು ಕಣ್ಣು
ಪ್ರಳಯದಲ್ಲಳಿದ ಬ್ರಹ್ಮ ವಿಷ್ಣು ರುದ್ರರನು ಮತ್ತೆ ಸೃಜಿಸೆ
ಸತ್ತ್ವ ರಜ ತಮೋಗುಣದ ಮೂರ ಛಾಯೆಯು ತೋರ್ಪುದಲ್ತೆ! ೪೧

ಹರವಶಾಧೀನಹೃದಯೆ, ದಯೆಯಿಂದ ಕೂಡಿದಂಥ ನಿನ್ನ
ಕೆಂಪು ಬಿಳುಪು ಕಪ್ಪುಗಳ ಕಾಂತಿಯಾಂತಿರುವ ಕಂಗಳಿಂದ
ನಮ್ಮ ಶುದ್ಧಿಗೆಂದೆಸಗುತಿರುವೆ ನೀ ಶೋಣಭದ್ರೆ, ಗಂಗೆ,
ಯಮುನೆಯೆಂದೆಂಬ ಮೂರು ತೀರ್ಥಗಳ ವಿಮಲ ಸಂಗಮವನೆ!

ನೀನು ಕಣ್ಣು ತೆರೆದಾಗ ಉದಯ, ಮುಚ್ಚಿದರೆ ಪ್ರಳಯ ಜಗಕೆ
ಎಂದು ಸತ್ಪುರುಷರೊರೆವ ಮಾತುಂಟು, ಭೂಧರೇಂದ್ರತನಯೆ!
ನಿನ್ನ ಕಣ್ದೆರವಿನಿಂದ ಹುಟ್ಟಿದೀ ಜಗವ ಪ್ರಲಯದಿಂದೆ
ಕಾಯಲೆಂದು ನೀನೆವೆಯ ಮುಚ್ಚದಿಹೆಯೆಂದು ನನ್ನ ಶಂಕೆ!

ಎಲೆ ಅಪರ್ಣೆ, ಕರ್ಣಾಂತ ಹಬ್ಬಿದೀ ನಿನ್ನ ಲೋಚನಗಳ
ಚಾಡಿಗಂಜಿ ಮುಳುಗಿದುವು ನೀರಸಿವೆ ಹೇಳುವಂತೆ ಮೀನ!
ಮುಚ್ಚಿಕೊಂಡ ದಳಗಳ ಕವಾಟವಿಳ್ಳಂಥ ಕುವಲಯವನು
ಕುಮುದಲಕ್ಷ್ಮೀ ಬೆಳಗಿನಲಿ ತೊರೆದು ಇರುಳಿನಲಿ ಹೊಗುವುದುಂಟು!

ಅರಳಿದುತ್ಪಲದ ಕಾಂತಿಯುಳ್ಳಂಥ ನೀಳ ನೋಟದಿಂದ
ದೂರವಿಹ ದೀನನೆನ್ನನೂ ಶಿವೆಯೆ ದಯದಿ ಮೀಯಿಸನ್ನು!
ಧನ್ಯನಹೆನು ನಾನಾವ ಹಾನಿಯೂ ನಿನಗೆ ಇದರೊಳಿಲ್ಲ:
ವನವೊ ಮನೆಯೊ ಸಮತೆಯಲಿ ಚಂದ್ರ ಕಿರಣಗಳ ಸುರಿವನಲ್ಲ!

ಅಗರಾಜತನಯೆ, ಬಾಗಿರುವ ನಿನ್ನ ಕಿವಿಗಳೆರಡು ಏಣು
ಕುಸುಮಶರನ ಕೋದಂಡ ಕೌತುಕವನಾರಿಗೆಸಗದಿಹವು?
ಶ್ರವಣಪಥದಾಚೆ ಚಾಚಿಕೊಂಡಿರುವ ನಿನ್ನ ಕಡೆಗಣ್ಣ ನೋಟ
ಮಾಡುತಿಹುದವನ್ನು ಹೂಡಿ ನಿಲ್ಲಿಸಿದ ಬಾಣವೊಂದು ಮಾಟ!

ಮಿರುಗುಗಲ್ಲದಲಿ ಬಿಂಬಿಸಿರುವಂಥ ಓಲೆಯೊಡನೆ ಕಳೆವ
ನಿನ್ನ ಮುಖವಿದನು ನಾಲ್ಕು ಚಕ್ರಗಳ ಮನ್ಮಥನ ವರೂಥ
ಎನುವೆನದನೇರಿ ಮಾರನಿದೊ, ರವಿಶಶಿಯ ಗಾಲಿಗೊಂಡು
ಅವನಿರಥವಡರಿ ಬರುವ ಪುರಮಥನವಲ್ಲಭನನೆದುರಿಸುವನು!

ಅಮೃತಲಹರಿಯನು ಮೀರುವ ಸರಸತಿಯ ಸೂಕ್ತಿವಾಹಿನಿಯನು
ಕಿವಿಯ ಬೊಗಸೆಯಲಿ ಸತತ ಕುಡಿದು, ಶರ್ವಾಣಿ, ಶಿರವ ನೀನು
ಆಡಿಸುತ್ತಿರಲು ಮೆಚ್ಚಿ, ನಿನ್ನ ಕುಂಡಲಗಣದ ದೇವಿ
ಝಣತ್ಕಾರದಿಂದುತ್ತರವ ನುಡಿಯುವಂತಿದೆ ತಾರದನಿಯಿಂ ! ೬೦

ಹೇ ಹಿಮಾದ್ರಿಕುಲಧ್ವಜನೆ, ನಿನ್ನ ಮೂಗಿನ ಬಿದಿರು ನಮಗೆ
ಯೋಗ್ಯವಾದ ಫಲಗಳನು ಬೇಗ ಕೊಡಲಿನ್ನು ; ತನ್ನ ಒಳಗೆ
ಮುತ್ತುಗಳ ತುಂಬಿಕೊಂಡಿಹುದು, ನಿನ್ನ ಚಂದ್ರನಾಡಿಯೊಂದು
ನಿಶ್ವಾಸದಿಂದ ಬಂದ ಮುತ್ತಿನಂದ ಧರಿಸಿರುವುದು ಹೊರಗೂ ! ೬೧

ಸುದತಿ, ಸಹಜವಶ ಕೆಂಪುಬಣ್ಣವನು ತಳೆದ ನಿನ್ನ ತುಟಿಯು
ಕಾಂತಿಗೊಪ್ಪುವುದನು ಹೋಲಿಕೆಯು : ಹವಳ ಬಳ್ಳಿ ಬಿಡಲಿ ಹಣ್ಣ !
ನಿನ್ನ ಅಧರಪ್ರತಿಫಲನದಿಂದ ಕೆಂಪಾದ ತೊಂಡೆಹಣ್ಣು
ಬಿಂಬವೆನಿಸಿಹುದು ನಿನ್ನ ತುಟಿಯ ಹೋಲೆಂತು ನಾಚದಿಹುದು ! ೬೨

ನಿನ್ನ ಮುಖಶಶಿಯ ಮುಗುಳುನಗೆಯ ಜೊನ್ನವನು ಸತತ ಕುಡಿದು,
ಆ ಚಕೋರಗಳಗಧಿಕ ಸಿಹಿಯಿಂದ ಜಿಹ್ವಾಜಾಡ್ಯವಾಯ್ತು !
ಹುಳಿಯ ಬಯಸಿ ಆ ಪಕ್ಷಿಗಳು ಚಂದ್ರಕಿರಣಕಾಂಜಿಯನು
ಮನಸು ಬಂದಂತೆ ಇರುಳು ಇರುಳು ಹೀಗೆ ಪಾನ ಮಾಡುತಿಹವು ! ೬೩

ನಿನ್ನ ಪತಿಯ ಗುಣಗಣದ ಕತೆಯನೆಡೆಬಿಡದೆ ಜಪಿಸುತಿರುವ,
ಜಪಾಸುಮದೊಲಿಹ ನಿನ್ನ ನಾಲಿಗೆಗೆ ಇರಲಿ ತಾಯಿ ವಿಜಯ !
ಅದರ ತುದಿಯೊಳಿರೆ ಹರಳಿನಂತೆ ಬಿಳಿದಾಗಿ ಕಂಗೊಳಿಸುವಾ
ಶಾರದೆಯ ಮೂರ್ತಿ ಪರಿಣಮಿಸುವುದಾಗ ಮಾಣಿಕ್ಯದೀಪವಾಗಿ ! ೬೪

ತಾಯಿ, ಸಮರದಲಿ ಗೆದ್ದ ದೈತ್ಯರನು, ನಿನ್ನ ಬಳಿಗೆ ಮರಳಿ,
ಚಂಡನಿಗೆ ಮಾತ್ರ ಸಲುವ ಶಂಭುನಿರ್ಮಾಲ್ಯವಿಮುಖರಾಗಿ,
ಜೋಡ ಕಳಚಿ ನಿಂತಾ ಗುಹೇಂದ್ರ ಹರ್ಯಾದಿ ಸುರೇಶ್ವರರಿಗೆ
ಕರ್ಪೂರದ ಬೆರೆತ ನಿನ್ನ ಬಾಯ ತಂಬುಲದ ಕವಳ ಕೊಡುವೆ ! ೬೫

ವಾಣಿ ತನ್ನ ವೀಣೆಯಲಿ ಪಶುಪತಿಯ ಹಲವು ಲೀಲೆಗಳನು
ಹಾಡುತಿರೆ, ನೀನು ತಲೆಯನೊಲೆದು ಮೆಚ್ಚುಗೆಯ ಮಾತುಗಳನು
ಆಡತೊಡಗಿದರೆ-ನಿನ್ನ ನುಡಿಯ ಸವಿ ವೀಣೆದನಿಯ ಮರೆಸಿ,
ವಾಣಿ ಗವಸಣಿಗೆಯಿಂದ ಮುಚ್ಚುವಳು ವೀಣೆಯದನು ನಾಚಿ! ೫೪

ವಾತ್ಸಲ್ಯದಿಂದ ಗಿರಿರಾಜ ತನ್ನ ಬೆರಳಿನಲಿ ಮುಟ್ಟಿದಂಥ,
ಮತ್ತೆ ಮತ್ತೆ ಶಿವ ಅಧರಪಾನಕಾತರದೊಳೆತ್ತಿದಂಥ,
ಶಂಭುವಿನ ಕೈಯೊಳಿರುವ ಕನ್ನಡಿಯ ಹಿಡಿಯಿದೆನಿಪ ನಿನ್ನ
ಎಣೆಯೆ ಇಲ್ಲದೀ ಗಲ್ಲವನು, ಶಿವೆಯೆ, ಎಂತು ಹೊಗಳಲಮ್ಮ! ೫೫

ನಿತ್ಯ ತ್ರಿಪುರಹರನಪ್ಪುಗೆಯನಾಂತು ಪುಳಕಗೊಳುವ ನಿನ್ನ
ಕೊರಳು ಪಡೆದುಕೊಂಡಿಹುದು ಮುಖಕಮಲನಾಳದೊಂದು ಸೊಬಗ!
ಆದರ ಕೆಳಗೆ, ಬಿಳಿದಾದರೂನು ಕರಿಯಗುರುಕೆಸರಿನಿಂದ
ಮಲಿನವಾಗಿರುವ ಮಾಲೆಯಿಹುದು ತಾವರೆಯ ಬಳ್ಳಿಯಂದ! ೫೬

ದೇವಿ, ಗತಿಗಮಕಗೀತ ನಿಪುಣೆಯೇ, ನಿನ್ನ ಕೊರಳಿನಲ್ಲಿ
ಒಪ್ಪುತಿರುವಂಥ ಮೂರು ರೇಖೆಗಳು ಮದುವೆ ಸಮಯದಲ್ಲಿ
ಈಶ ಕಟ್ಟಿರುವ ಹಲವು ಎಳೆಯ ಮಾಂಗಲ್ಯ ಸೂತ್ರದಂತೆ;
ಹಲವು ಮಧುರರಾಗಗಳ ನೆಲೆಯೆನಿಪ ಮೂರು ಗ್ರಾಮದಂತೆ! ೫೭

ತಾವರೆಯ ದಂಟಿನಂತೆ ಮಿದುವಾದ ನಿನ್ನ ಭುಜಲತೆಗಳ
ಚೆಲುವಿಕೆಯನು ಹೊಗಳುವನು ನಾಲ್ಕು ಮುಖದಿಂದ ಸರಸಿಜಭವ-
ಐದನೆಯ ತಲೆಯ ಛೇದಿಸಿದ ಅಂಧಕಾರಿಯನು ನೆನೆಯುತಂಜಿ,
ಉಳಿದ ನಾಲ್ಕು ತಲೆಗಳನು ನೀನು ಕಾಪಿಡುವೆಯೆಂದು ನಂಬಿ! ೫೮

ಉಗುರಿನೊಂದು ಸೊಗದಿಂದ ನವನಳಿನರುಚಿಯ ನಗುವ ನಿನ್ನ
ಕಯ್ಯ ಕಾಂತಿಯನು ಎಂತು ಹೊಗಳುವುದು? ಹೋಲಲರಿದು ಕಮಲ
ಲೇಶಮಾತ್ರವೂ ನಿನ್ನ ಕರವ: ತನ್ನಲ್ಲಿ ಕ್ರೀಡೆಗೈವ
ಶ್ರೀಯ ಚರಣಲತ್ತಿಗೆಯ ರಸವ ತಾಳಿದರೆ ಹೋಲಬಹುದು! ೫೯

ಗಣಪ ಷಣ್ಮುಖರು ಕುಡಿದ ಹಾಲು ಎಡೆಬಿಡದೆ ಸುರಿವ ನಿನ್ನ
ಮೊಲೆಗಳೆಲೆ ತಾಯೆ ಕಳೆದು ಬಿಸುಡಲೌ ನನ್ನ ಮನಸಿನಳಲ!
ಅವನು ನೋಡಿ ಹೇರಂಬ ತನ್ನ ಕುಂಭಗಳ ತಡವಿ ತಡವಿ
ನೋಡಿಕೊಳ್ಳುವನು ಬೇಗ ಬೇಗ ಶಂಕೆಯಲಿ, ನಗೆಯ ಬರಿಸಿ! ೬೦

ನಿನ್ನ ಮೊಲೆಗಳಿವು ಅಮೃತರಸದ ಮಾಣಿಕ್ಯಕುಂಭವೆಂದು
ತಿಳಿವೆನಗರಾಜಧ್ವಜವೆ, ಇದರೊಳೆನಗಿಲ್ಲ ಶಂಕೆಯಿನಿಸು:
ಈಂಟುತದನು ಆ ದ್ವಿರದವದನ ಷಣ್ಮುಖರು ಇಂದಿಗೂನು
ಹೆಣ್ಣ ಕೂಟವರಿಯದ ಕುಮಾರರಾಗಿಯೇ ಉಳಿದಿರುವರು! ೬೧

ಆ ಗಜಾಸುರನ ಕುಂಭದಿಂದೊಗೆದ ಮುತ್ತುಗಳಲಿ ಕೋದ,
ನಿನ್ನ ತೊಂಡೆವಣ್ದುಟಿಯ ಕಾಂತಿಯಿಂದೊಳಗೆ ಬಣ್ಣಗೊಂಡ,
ಆ ಪುರಾಂತಕನ ಶೌರ್ಯಯುಕ್ತ ಕೀರುತಿಯ ಹೋಲುತಿರುವ
ವಿಮಲ ಹಾರಲತಿಕೆಯನು, ತಾಯೆ, ಧರಿಸಿಹುದು ನಿನ್ನ ವಕ್ಷ! ೬೨

ಧರಣಿಧರಕನ್ಯೆ, ನಿನ್ನ ಮೊಲೆವಾಲನಿದನು ತಿಳಿವೆ ನಾನು:
ಸರಸ್ವತಿಯ ರೂಪದಲಿ ಹಾಲ ಕಡಲೆದೆಯೊಳುಣ್ಮಿತೆಂದು:
ಕುಡಿದು ದ್ರವಿಡಶಿಶು ದಯದಿ ನೀನು ಕೊಟ್ಟಂಥ ಸ್ತನ್ಯವದನು
ಪೌಢ ಕವಿಪಂಕ್ತಿಯಲ್ಲಿ ಕಮನೀಯ ಕವಿಯೆ ಆದನಹುದು! ೬೩

ಹರನ ಕೋಪದ ಜ್ವಾಲೆಗಳು ಸುತ್ತಿ ಮುತ್ತಿಕೊಳಲು ವಪುವ,
ನಿನ್ನ ಆಳವಹ ನಾಭಿಸರಸಿಯಲಿ ಮದನ ಮುಳುಗಿಕೊಂಡ;
ಧೂಮಲೇಖೆಯುದರಿಂದ ಮೇಲಿದ್ದಿತದನೆ, ಗಿರಿತನೂಜೆ,
ನಿನ್ನ ರೋಮಗಳ ರಾಜಿಯೆಂದು ತಿಳಿಯುವರು ಜನರು, ತಾಯೆ! ೬೪

ಜನನಿ ಶಿವೆಯೆ, ಕಾಳಿಂದಿಯೊಂದು ತೆಳುವಾದ ತೆರೆಯ ತೆರದಿ
ನಿನ್ನ ಬಡನಡುವಿನಲ್ಲಿ ಹೊಳೆಯುತಿರುವಿದುವೆ ರೋಮರಾಜಿ,
ನಿನ್ನ ಕುಚಕಲಶಯುಗಳ ಒತ್ತಿದುದರಿಂದ ಕಿರಿದುಗೊಂಡು
ವ್ಯೋಮವದು ನಿನ್ನ ನಾಭಿಕುಹರಿಣಿಯ ಹೊಗುವ ತೆರದೊಳಿಹುದು! ೬೫

ನಿನ್ನ ನಾಭಿಯಿದು ಚಲನೆಯಿಲ್ಲದಿಹ ಗಂಗೆಯೊಂದು ಸುಳಿಯು;
ಮೊಲೆಯ ಮೊಗ್ಗಾದ ರೋಮತತಿಯೆಂಬ ಲತೆಗೆ ಪಾತಿಯಹುದು;
ಮದನತೇಜೋಗ್ನಿಗಿದು ಹೋಮಕುಂಡ; ರತಿಯು ಆಡುದಾಣ;
ಜಯಿಪುದಿದು ಹರನ ನಯನಯುಗಸಿದ್ಧಿಗಾದ ಬಿಲದ ದ್ವಾರ! ೬೬

ಸಹಜವಾಗಿ ಬಡವಾದ, ಸ್ತನಭಾರದಿಂದ ಬಳಲಿದಂಥ,
ಬಾಗಿದಾಕಾರವುಳ್ಳ,ಮೆಲ್ಲನಿದು ಮುರಿವುದೆನಿಸಿ ತೋರ್ಪ,
ಒಡೆದ ದಡದ ಮೇಲಿರುವ ಮರದೊಂದು ಸ್ಥಿತಿಯ ಹೋಲುತಿರುವ
ನಿನ್ನ ನಡುವಿಗೆಲೆ ನಾರಿಯರ ತಿಲಕ ಸಮನಿಸಿರಲಿ ಕುಶಲ! ೬೭

ಬೆವರುತಿರುವ, ತಟಘಟಿತವಾದ ಕುಪ್ಪಸವ ಸೀಳುತಿರುವ,
ಕಂಕುಳನು ತಾಕುತಿರುವ ನಿನ್ನ ಹೊಂಗಳಸದಂಥ ಮೊಲೆಯ
ಭಾರಕೆಲೆ ದೇವಿ ನಿನ್ನ ತನುವು ಮುರಿದೀತು ಎಂದು ಸ್ಮರನು
ತ್ರಿವಳಿಯೆಂಬ ಏಲಕ್ಕಿ ಬಳ್ಳಿಯಿಂ ಮೂಮೆ ಕಟ್ಟಿರುವನು! ೬೮

ಭೂಧರೇಂದ್ರನೆಲೆ ಗೌರಿ, ವಿಸ್ತಾರವನು ಗುರುತ್ವವನ್ನು
ತನ್ನ ತಪ್ಪಲಲಿ ತೆಗೆದು ನಿನಗೆ ಬಳುವಳಿಯನಿತ್ತನಹುದು!
ಎಂತಲೇನೆ ಈ ನಿನ್ನ ಹರವಾದ ಗುರು ನಿತಂಬಭಾರ
ಮುಸುಕಿ ವಸುಧೆಯನ್ನೆಲ್ಲ, ಅದಕೆ ಲಾಘವವನೀವುದಮ್ಮ! ೬೯

ಆನೆಸೊಂಡಿಲನು ಮತ್ತೆ ಹೊಂಬಾಳೆ ಕಂಬಗಳನು ತಾವು
ಗೆದ್ದು ಮೆರೆಯುತಿಹವೆಲೆ ವಿಧಿಜ್ಞೆಯೇ ನಿನ್ನ ತೊಡೆಗಳೆರಡು!
ಬಟ್ಟಿತಾದ, ಪತಿಗೆರಗಿ ನಿಚ್ಚ ಕಠಿಣತೆಯ ತಾಳಿದಂಥ
ನಿನ್ನ ಮೊಣಕಾಲ್ಗಳಿಹವು ದಿಗ್ಗಜೇಂದ್ರಗಳ ಕುಂಭದಂದ! ೭೦

ರುದ್ರನನು ಗೆಲಲು ಪಂಚಶರನು, ಗಿರಿಸುತೆಯೆ, ನಿನ್ನವೆರಡು
ಮೀನಖಂಡವನು ಬತ್ತಳಿಕೆಯ ಮಾಡಿರುವನಮ್ಮ ದಿಟಕು!
ಅವುಗಳಗ್ರದಲಿ ಪಾದಯುಗದುಗುರುಕೊನೆಯ ರೂಪವಾಂತು,
ಸುರಕಿರೀಟಗಳ ಸಾಣೆಯಿಂದ ಕೂರಾದ ಶರಗಳುಂಟು! ೭೧

ನಿನ್ನ ಚರಣಗಳನಂಬೆ ತಲೆವಣಿಗಳೆಂದು ಶ್ರುತಿಗಳೆಲ್ಲ
ಧರಿಸಿಕೊಂಡಿಹವು; ನಿನಗೆ ಪಾದ್ಯವಾ ಹರನ ಜಡೆಯ ಗಂಗೆ;
ನಿನ್ನ ಪಾದದಲತಿಗೆಯ ಸಿರಿಯು ಹರಿಶಿರೋಮಣಿಗೆ ಕೆಂಪ
ಕೊಡುವುದಂಥ ಪದಯುಗವ ದಯದಿ ಮಮಶಿರದೊಳಿರಿಸೆ, ಅಮ್ಮ! ೮೩

ಹೊಳೆಯುವಲತಿಗೆಯ ಬಳಿದ, ನಯನರಮಣೀಯವಾದ ನಿನ್ನ
ಪಾದಗಳ ಯುಗಳಕೆಲೆ ಮಹಾದೇವಿ ಸಲಲಿ ನಮ್ಮ ನಮನ!
ಪ್ರಮದವನದಸುಗೆ ಮರವು ದೋಹದಕೆ ನಿನ್ನ ಚರಣಯುಗದ
ತಾಡನವನು ಬಯಸಿದರೆ ಮಚ್ಚರಿಸುತಿಹನು ಆ ಮಹೇಶ! ೮೪

ತಪ್ಪು ಹೆಸರಿನಲಿ ನಿನ್ನ ಕರೆದು, ಅಪರಾಧವೆಂದು ಬಾಗಿ
ನಿಂತ ಭರ್ತನನು ನೀನು ಪಾದಕಮಲದಲಿ ಒದೆಯಲಾಗಿ,
ದಹನದಿಂದಾದ ಮನದ ಮುಳ್ಳನೀಗೊಗೆವೆನೆಂದು ಬಗೆದ
ಮನ್ಮಥನ ವೀರ ಜಯಘೋಷವಾಯ್ತು ಕಾಲ ಕಡಗದಿಂದ! ೮೫

ಮಂಜುವೆಟ್ಟದಲಿ ಚರಿಸಿ ನುರಿತ, ಹಗಲಿರುಳು ಒಪ್ಪುತಿರುವ,
ಸಮಯಿಭಕ್ತರಿಗೆ ಲಕ್ಷ್ಮಿರೂಪದ್ಯೆಸಿರಿಯ ನೀಡುವಂಥ
ನಿನ್ನ ಪಾದಗಳು, ಜನನಿ, ಮಂಜಿನಲಿ ಸುಗಿವ, ಇರುಳು ಮುಗಿವ,
ಸಿರಿಗೆ ಬರಿಯ ನೆಲೆಯಾದ ಕಮಲಗಳ ಗೆಲುವುದೇನು ಚೋದ್ಯ! ೮೬

ಕೀರ್ತಿಗಳಿಗೆ ತೌರಾದ ವಿಪದಗಳಿಗೆಡೆಯ ಕೊಡದ ನಿನ್ನ
ಪದವ ಕಠಿಣವಹ ಆಮೆಚಿಪ್ಪಿಗೆಂತುಪಮಿಸಿದರೊ ಸುಜನ?
ಮದುವೆ ಸಮಯದಲಿ ಸಪ್ತಪದಿಯಲ್ಲಿ ನಿನ್ನ ಚರಣಯುಗವ
ಕೈಲಿ ಹಿಡಿದು ಅಸಿಕಲ್ಲೊಳೆಂತುಯಿರಿಸಿದನೊ ದಯದಿನೀಶ? ೮೭

ರಿಕ್ತಜನಕೆ ಶುಭಸಂಪದಂಗಳನು ಬೇಗ ಕೃಪೆಯೊಳೀವ
ನಿನ್ನ ಚರಣಗಳು ದೇವನಾರಿಯರ ಹಸ್ತವಾರಿಜವನು
ಮುಗುಳುಗೈವ ನಖಚಂದ್ರನಿಂದ ನಗುತಿಹವು–ಚಿಗುರುಗೈಲಿ
ದೇವಕುಲಕಷ್ಟೆ ಫಲವನೀವ ಸುರತರುಗಳನ್ನು, ಚಂಡಿ! ೮೮

ದೇವಿ, ಅಲತಿಗೆಯು ಬೆರೆತ ನಿನ್ನ ಪಾದಾಭಿಷೇಕಜಲವ
ಕುಡಿವೆ ವಿದ್ಯಾರ್ಥಿಯಾದ ನಾನು, ಹೇ ಜನನಿ, ಸರ್ವಕಾಲ!
ಸಹಜ ಮೂಕರನು ಕೂಡಿ ಕವಿಗಳಾಗಿಸುವ ತೀರ್ಥವಿದುವು
ಸರಸ್ವತಿಯ ಮುಖಕಮಲತಾಂಬೂಲರಸವೆ ಆಗಿರುವುದು! ೭೮

ದೀನಜನ ಬಯಸುವೆಲ್ಲ ಸಿರಿಗಳನು ನಿಚ್ಚ ನೀಡುವಂಥ,
ಸಾಂದ್ರಸೌಂದರ್ಯಪ್ರಕರಮಕರಂದ ರಸವ ಸೂಸುವಂಥ,
ದಿವ್ಯಮಂದಾರ ಮಂಜರಿಯ ಸೊಬಗ ತಾಳಿಕೊಂಡು ನಿಂತ
ನಿನ್ನ ಚರಣದಲಿ ಮುಳುಗಿ ಜೀವವಿದು ತುಂಬಿಯಾಗಲಮ್ಮ! ೭೯

ಚಾರುಚರಿತೆಯೇ, ನಿನ್ನ ಚರಣವಿನ್ಯಾಸದೊಂದು ಸೊಬಗ
ಅರಿಯಲೆಳಸಿ ದಟ್ಟಡಿಯನಿಟ್ಟಾಡುತಿಹವು ಮನೆಯ ಹಂಸ;
ಅವಕೆ ಸುಭಗಮಣಿನೂಪುರಾರಾವದೊಂದು ವ್ಯಾಜದಿಂದ
ನಡೆಯ ಕಲಿಸಿಕೊಡುವಂತೆ ಮೆರೆಯುತಿವೆ ನಿನ್ನ ಪದಸರೋಜ! ೮೦

ನಿನ್ನ ಕುರುಳೋಳಿ ಕೊಂಕು, ಮುಗುಳುನಗೆ ಸಹಜವಾಗಿ ಸರಳ;
ದೇಹ ಮಾರ್ದವದಿ ಶಿರಿಷ, ಕುಚತಟವೊ ಕಲ್ಲಿನಂತೆ ಪರುಷ;
ನಡುವು ಬಡವಹುದು, ಪೃಥುಲವಾಗಿಹುದು ವಕ್ಷಜಘನವಿಷಯ:
ಇಂತು ಹರನರುಣ ಕರುಣ ನೀನೊಪ್ಪುತಿರುವೆ ಕಾಯಲಿಳೆಯ! ೮೧

ನೀನು ಪುರಹರನ ರಾಣಿವಾಸವಹೆ; ಎಂತಲೇನೆ ನಿನ್ನ
ಚರಣಪೂಜೆಯದು ತರಳಚಿತ್ತರಿಗೆ ಸುಲಭವಲ್ಲವಮ್ಮ!
ಆದ್ದರಿಂದ ಇಂದ್ರಾಧಿ ಸುರರು ನಿನ್ನೊಂದು ಬಾಗಿಲಲ್ಲಿ
ನಿಂತು ಅಣಿಮಾದಿಗಳ ಸಮೇತ, ಪಡೆಯುವರು ಪರಮಸಿದ್ಧಿ! ೮೨

ಬ್ರಹ್ಮ ವಿಷ್ಣು ರುದ್ರೇಶ್ವರರು ನಿನಗೆ ಮಂಚವಾಗಿರುವರು;
ಸದಾಶಿವನೊ ಬಿಳಿದಾದ ಮೇಲ್ಹಾಸಿನೊಂದು ರೂಪನಾಂತು
ನಿನ್ನ ಪ್ರಭೆಯ ಪ್ರತಿಫಲನದಿಂದ ಕೆಂಪಾಗಿ ಕಂಗೊಳಿಪನು,
ಶೃಂಗಾರರಸವೆ ದೇಹಗೊಂಡವೋಲೆಸಗಿ ಕೌತುಕವನು! ೮೩

ಆ ಕಲಂಕ ಕಸ್ತೂರಿಯಹುದು, ಪನ್ನೀರು ಚಂದ್ರಬಿಂಬ,
ಕಪ್ಪುರಗಳು ಹದಿನಾರು ಕಲೆಗಳೀ ತೆರದಿ ತುಂಬಿ ನಿಂದ
ಇಂದುಮಂಡಲದ ಪಚ್ಚೆಕರಡಿಗೆಯ ನೀನು ಭೋಗದಿಂದ
ನಿಚ್ಚ ಬರಿದುಗೊಳಿಸಲದ ತುಂಬುವನು ಮರಳಿ ಮರಳಿ ಬ್ರಹ್ಮ! ೮೪

ನಿನ್ನ ಚರಣದಲಿ ಹುಟ್ಟಿದಣಿಮಾದಿಗಳಲಿ, ನಿತ್ಯೆಯರಲಿ
ಸುತ್ತುಗೊಂಡಿರುವ ನೀನೆ ತಾನೆಂದು ಸತತ ಯಾವ ಭಕ್ತ
ಭಾವಿಸುವನಾತ ತ್ರಿಣಯನನ ಮಹಿಮೆಯನ್ನು ತೃಣವಗೈದು
ಪ್ರಳಯಕಾಲಾಗ್ನಿಯಾರತಿಯ ಕೊಳುವುದೇನು ಚೋದ್ಯವಹುದು! ೮೫

ಯಾವ ಕವಿ ತಾನೆ ವಿಧಿಯ ಪತ್ನಿಯನು ಸ್ತೋತ್ರಗೈಯದಿಹನು?
ಧನವ ಗಳಿಸಿದವನಾರು ಹರಿಸತಿಗೆ ಭರ್ತನಾಗದಿಹನು?
ಪತಿವ್ರತೆಯರಲಿ ಅಗ್ರಗಣ್ಯೆಯೇ, ಮಹಾದೇವ ಹೊರತು
ನಿನ್ನ ಕುಚಗಳಪ್ಪುಗೆಯು ಕುರವಕದ ಮರಕು ಕೂಡ ಸಿಗದು! ೮೬

ನಿನ್ನ ನೆನೆವವನು ವಿಷ್ಣು ಬ್ರಹ್ಮರಿಗೆ ಕರುಬು ಮೂಡುವಂತೆ
ಲಕ್ಷ್ಮಿಸರಸತಿಯರೊಡನೆ ವಿಹರಿಪನು; ರತಿಸತೀತ್ವವನ್ನೆ
ಶಿಥಿಲಗೊಳಿಸುವನು ರಮ್ಯವಪುವಾಗಿ; ಚಿರಂಜೀವಿಯಾಗಿ,
ಅಜ್ಞತೆಯ ನೀಗಿ ಆಗುವನು ಪರಾನಂದರಸದ ಭೋಗಿ! ೮೭

ಹೇ ಪರಬ್ರಹ್ಮಮಹಿಷಿ, ಅಜನ ಸತಿಯಾದ ಸರಸತಿಯನು,
ಹರಿಯ ಪತ್ನಿ ಲಕ್ಷ್ಮಿಯನು, ಹರನ ಅರ್ಧಾಂಗಿ ಪಾರ್ವತಿಯನು
ನೀನೆ ಅಹುದೆನುವರಿವರು ಮೂವರನು ಮೀರಿ ಜಗವ ನೀನು
ಮರುಳು ಮಾಡುತಿಹೆ ಮಹಾಮಾಯೆ ನಿಸ್ಸೀಮ ಮಹಿಮೆಯಾಗಿ! ೮೮

ಸ್ವಂತ ಕಿರಣಾಳಿಯಿಂದ ರವಿಗೆ ಆರತಿಯ ಬೆಳಗುವಂತೆ,
ಚಂದ್ರಕಾಂತಜಲಕಣಗಳಿಂದ ಶಶಿಗರ್ಘ್ಯವೆತ್ತುವಂತೆ,
ತನ್ನ ಜಲದಿಂದ ಜಲಧಿಗೊಲಿದು ತರ್ಪಣವ ನೀಡುವಂತೆ
ನಿನ್ನ ನುಡಿಗಡಣದಿಂದ ನಿನಗೆ ಸ್ತುತಿಯಿದನು ಸಲಿಪೆ, ಮಾತೆ! ೮೯

ಅನುಬಂಧ

ಕೆಲವು ಮೂಲಪದ್ಯಗಳು

(ಅಂಕಿಗಳು ಅನುವಾದಪದ್ಯಗಳ ಸಂಖ್ಯೆಯನ್ನು ಸೂಚಿಸುತ್ತವೆ)

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ
ಅತಸ್ತ್ವಾಮಾರಾಧ್ಯಾಂ ಹರಿಹರ ವಿರಿಂಚಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ (೧)

ಅವಿದ್ಯಾನಾಮಂತಸ್ತಿಮಿರ ಮಿಹಿರ ದ್ವೀಪನಗರೀ
ಜಡಾನಾಂ ಚೈತನ್ಯಸ್ತಬಕಮಕರಂದ ಸ್ರುತಿಝರೀ
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ
ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ ಭವತಿ (೩)

ಧನುಃ ಪೌಷ್ಪಂ ಮೌರ್ವೀ ಮಧುಕರಮಯೀ ಪಂಚ ವಿಶಿಖಾಃ
ವಸಂತಃ ಸಾಮಂತೋ ಮಲಯಮರುದಾಯೋಧನರಥಃ
ತಥಾಪ್ಯೇಕಃ ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾ-
ಮಪಾಂಗಾತ್ತೇ ಲಬ್ಧ್ವಾ ಜಗದಿದಮನಂಗೋ ವಿಜಯತೇ (೬)

ಕ್ವಣತ್ಕಾಂಚೀದಾಮಾ ಕರಿಕಲಭ ಕುಂಭಸ್ತನನತಾ
ಪರಿಕ್ಷೀಣಾ ಮಧ್ಯೇ ಪರಿಣತ ಶರಚ್ಚಂದ್ರವದನಾ
ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ
ಪುರಸ್ತಾದಾಸ್ತಾಂ ನಃ ಪುರಮಥಿತುರಾಹೋಪುರುಷಿಕಾ (೭)

ನರಂ ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ
ತವಾಪಾಂಗಾಲೋಕೇ ಪತಿತಮನುಧಾವಂತಿ ಶತಶಃ
ಗಳದ್ವೇಣೀಬಂಧಾಃ ಕುಚಕಲಶವಿಸ್ರಸ್ತಸಿಚಯಾಃ
ಹಠಾತ್ತ್ರುಟ್ಯತ್ಕಾಂಚ್ಯೋ ವಿಗಳಿತದುಕೂಲಾ ಯುವತಯಃ (೧೩)

ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ
ಹರಾರ್ಧಂ ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್
ಸ ಸದ್ಯಃ ಸಂಕ್ಷೋಭಂ ನಯತಿ ವನಿತಾ ಇತ್ಯತಿಲಘು
ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಮ್ (೧೯)

ಜಪೋ ಜಲ್ಪಃ ಶಿಲ್ಪಂ ಸಕಲಮಪಿ ಮುದ್ರಾವಿರಚನಾ
ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ
ಪ್ರಣಾಮಃ ಸಂವೇಶಃ ಸುಖಮಖಿಲಮಾತ್ಮಾರ್ಪಣದೃಶಾ
ಸಪರ್ಯಾ ಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್ (೨೭)

ಧುನೋತು ಧ್ವಾಂತಂ ನಸ್ತುಲಿತ ದಲಿತೇಂದೀವರವನಂ
ಘನಸ್ನಿಗ್ಧ ಶ್ಲಕ್ಷ್ಣಂ ಚಿಕುರನಿಕುರುಂಬಂ ತವ ಶಿವೇ
ಯದೀಯಂ ಸೌರಭ್ಯಂ ಸಹಜಮುಪಲಬ್ಧುಂ ಸುಮನಸಃ
ವಸಂತ್ಯಸ್ಮಿನ್ಮನ್ಯೇ ಬಲಮಥನವಾಟೀವಿಟಪಿನಾಮ್ (೪೩)

ತನೋತು ಕ್ಷೇಮಂ ನಸ್ತವ ವದನಸೌಂದರ್ಯಲಹರೀ
ಪರೀವಾಹಸ್ರೋತಸ್ಸರಣಿರಿವ ಸೀಮಂತಸರಣಿಃ
ವಹಂತೀ ಸಿಂಧೂರಂ ಪ್ರಬಲಕಬರೀ ಭಾರತಿಮಿರ
ದ್ವಿಷಾಂ ಬೃಂದೈರ್ಬಂದೀಕೃತಮಿವ ನವೀನಾರ್ಕಕಿರಣಂ (೪೪)

ನಿಮೇಷೋನ್ಮೇಷಾಭ್ಯಾಂ ಪ್ರಲಯಮುದಯಂ ಯಾತಿ ಜಗತೀ
ತವೇತ್ಯಾಹುಃ ಸಂತೋ ಧರಣಿಧರರಾಜನ್ಯತನಯೇ
ತ್ವದುನ್ಮೇಷಾಜ್ಜಾತಂ ಜಗದಿದಮಶೇಷಂ ಪ್ರಲಯತಃ
ಪರಿತ್ರಾತುಂ ಶಂಕೇ ಪರಿಹೃತನಿಮೇಷಾಸ್ತವ ದೃಶಃ (೫೬

ಸ್ಫುರದ್ಗಂಡಾಭೋಗಪ್ರತಿಫಲಿತ ತಾಟಂಕ ಯುಗಲಂ
ಚತುಶ್ಚಕ್ರಂ ಮನ್ಯೇ ತವ ಮುಖಮಿದಂ ಮನ್ಮಥರಥಂ
ಯಮಾರುಹ್ಯ ದ್ರುಹ್ಯತ್ಯವನಿರಥಮರ್ಕೇಂದುಚರಣಂ
ಮಹಾವೀರೋ ಮಾರಃ ಪ್ರಮಥಪತಯೇ ಸಜ್ಜಿತವತೇ (೫೯

ಸಮಂ ದೇವಿ ಸ್ಕಂದದ್ವಿಪವದನ ಪೀತಂ ಸ್ತನಯುಗಂ
ತವೇದಂ ನಃ ಖೇದಂ ಹರತು ಸತತಂ ಪ್ರಸ್ನುತಮುಖಮ್
ಯದಾಲೋಕ್ಯಾಶಂಕಾಕುಲಿತಹೃದಯೋ ಹಾಸಜನಕಃ
ಸ್ವಕುಂಭೌ ಹೇರಂಬಃ ಪರಿಮೃಶತಿ ಹಸ್ತೇನ ಝಟಿತಿ (೬೦)

ಅಮೂ ತೇ ವಕ್ಷೋಜಾವಮೃತ ರಸಮಾಣಿಕ್ಯಕುತುಪೌ
ನ ಸಂದೇಹಸ್ಪಂದೋ ನಗಪತಿಪತಾಕೇ ಮನಸಿ ನಃ
ಪಿಬಂತೌ ತೌ ಯಸ್ಮಾದವಿದಿತವಧೂಸಂಗರಸಿಕೌ
ಕುಮಾರಾವದ್ಯಾಪಿ ದ್ವಿರದವದನ ಕ್ರೌಂಚದಲನೌ (೬೧)

ತವಸ್ತನ್ಯಂ ಮನ್ಯೇ ಧರಣಿಧರಕನ್ಯೇ ಹೃದಯತಃ
ಪಯಃಪಾರಾವಾರಃ ಪರಿವಹತಿ ಸಾರಸ್ವತಮಿವ
ದಯಾವತ್ಯಾ ದತ್ತಂ ದ್ರವಿಡಶಿಶುರಾಸ್ವಾದ್ಯ ತವ ಯತ್
ಕವೀನಾಂ ಪ್ರೌಢಾನಾಮಜನಿ ಕಮನೀಯಃ ಕವಯಿತಾ (೬೨)

ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ
ಗಭೀರೇ ತೇ ನಾಭೀಸರಸಿ ಕೃತಸಂಗೋ ಮನಸಿಜಃ
ಸಮುತ್ತಸ್ಥೌ ತಸ್ಮಾದಚಲತನಯೇ ಧೂಮಲತಿಕಾ
ಜನಸ್ತಾಂ ಜಾನೀತೇ ಜನನಿ ತವ ರೋಮಾವಲಿರಿತಿ (೬೪)

ಕಲಂಕಃ ಕಸ್ತೂರೀ ರಜನಿಕರಬಿಂಬಂ ಜಲಮಯಂ
ಕಲಾಭಿಃ ಕರ್ಪೂರೈರ್ಮರಕತಕರಂಡಂ ನಿಬಿಡಿತಮ್
ಅತಸ್ತ್ವದ್ಭೋಗೇನ ಪ್ರತಿದಿನಮಿದಂ ರಿಕ್ತಕುಹರಂ
ವಿಧಿರ್ಭೂಯೋ ಭೂಯೋ ನಿಬಿಡಯತಿ ನೂನಂ ತವಕೃತೇ (೮೪)

ಪ್ರದೀಪಜ್ವಾಲಾಭಿರ್ದಿವಸಕರ ನೀರಾಜನವಿಧಿಃ
ಸುಧಾಸೂತೇಶ್ಚಂದ್ರೋಪಲಜಲಲವೈರರ್ಘ್ಯರಚನಾ
ಸ್ವಕೀಯೈರಂಭೋಭಿಃ ಸಲಿಲ ನಿಧಿಸೌಹಿತ್ಯಕರಣಂ
ತ್ವದೀಯಾಭಿರ್ವಾಗ್ಭಿಸ್ತವ ಜನನಿ ವಾಚಾಂ ಸ್ತುತಿರಿಯಮ್ (೮೯)

ಟಿಪ್ಪಣಿಗಳು

(ಅಂಕಿಗಳು ಪದ್ಯಸಂಖ್ಯೆಯನ್ನು ಸೂಚಿಸುತ್ತವೆ)

೧. ಶಕ್ತಿಯೊಡನೆ ಕೂಡಿದಾಗ ಮಾತ್ರ ಶಿವನಿಂದ ಸೃಷ್ಟಿಸಾಧ್ಯ; ಶಿವ–ಶಕ್ತಿಯರ ಸಮ್ಮಿಲನವಾಗದೆ ದೇವತೆಗಳು ಚಲಿಸುವುದೂ ಶಕ್ಯವಿಲ್ಲ. ಶಕ್ತಿ–ಜಗನ್ಮಾತೆ–ಯಿಲ್ಲದೆ ಯಾವುದೂ ಆಗದು; ಅವಳಿಗೇ ಪರಮಪ್ರಾಶಸ್ತ್ಯ.

೨. ಸೃಷ್ಟಿ ಸ್ಥಿತಿ ಲಯಗಳಿಗೆ ಲೋಕಮಾತೆಯ ಪಾದರೇಣುವೇ ಮೂಲ.

೩. ಸ್ತಬಕ—ಹೂಗೊಂಚಲು.

೪. ಶರಣ್ಯೆ—ಶರಣಾಗಲು ತಕ್ಕವಳು, ಆಶ್ರಯ ಕೊಡುವವಳು.

೫. ಭಸ್ಮಾಸುರವಿನಾಶಕ್ಕಾಗಿ ವಿಷ್ಣು ಮೋಹಿನೀರೂಪ ತಳೆದ ಕತೆಯನ್ನಿದು ಸೂಚಿಸುತ್ತದೆ. ಮನ್ಮಥ ಅಶರೀರನಾಗಿದ್ದರೂ—ಅವನ ದೇಹ ರತಿಯ ಕಣ್ಣುಗಳಿಗೆ ಮಾತ್ರ ಗೋಚರವಂತೆ—ಮುನಿಗಳನ್ನು ಮೋಹಗೊಳಿಸಬಲ್ಲ. ಈ ಶಕ್ತಿ ಬಂದದ್ದು ತ್ರಿಪುರಸುಂದರಿಯ ಕೃಪೆಯಿಂದ.

೬. ಅತ್ಯಂತ ಕೋಮಲವಾದ ಮತ್ತು ಅರೂಪವಾದ ವಸ್ತುಗಳನ್ನು ಸಮರ ಸಾಧನಗಳನ್ನಾಗಿಟ್ಟುಕೊಂಡು ಅನಂಗನೂ ಏಕಾಂಗಿಯೂ ಆದ ಮದನ ಲೋಕವನ್ನು ಗೆಲ್ಲುತ್ತಾನೆ; ಈ ಸೋಜಿಗಕ್ಕೆ ಕಾರಣ ದೇವಿಯ ಅನುಗ್ರಹ.

೭. ಕರಿಕಲಭ—ಮರಿಯಾನೆ. ಪಯೋಜ—ಸ್ತನ. ಶಾರದೇಂದು—ಶರತ್ಕಾಲದ ಚಂದ್ರ.

೮. ನೀಪ—ಕದಂಬ ಅಥವಾ ಒಂದು ಜಾತಿಯ ಅಶೋಕವೃಕ್ಷ.

೧೧. ಸರ್ವೇಶ್ವರಿಯ ಅನುಪಮ ಸೌಂದರ್ಯವನ್ನು ನೋಡಿ ಅವಳ ಅಂಗಸುಖಕ್ಕಾಗಿ ಅಪ್ಸರೆಯರು ಕಾತರಿಸುತ್ತಾರೆ. ಆದರೆ ಅದು ಸದಾಶಿವನಿಗಲ್ಲದೆ ಇತರರಿಗೆ ಸಿಗದು; ಆದ್ದರಿಂದ ಅವರು ಶಿವಸಾಯುಜ್ಯವನ್ನು ಬಯಸುತ್ತಾರೆ, ತನ್ಮೂಲಕನಾದರೂ ದೇವಿಯ ಸಂಗ ದೊರೆಯುವುದೆಂಬ ನಂಬಿಕೆಯಿಂದ. ಆದರೆ ಅವರು ನಿರಾಶರಾಗಬೇಕು; ಶಿವಸಾಯುಜ್ಯ ತಪಸ್ಸಿಗೂ ಸಿಗದಂಥದು.

೧೩. ಜಗನ್ಮಾತೆಯನ್ನು ಪೂಜಿಸುವ ಭಕ್ತ ಮಧುರವಾಕ್ಕುಗಳನ್ನುಳ್ಳ ಕವಿಯಾಗಿ ಪರಿಣಮಿಸುತ್ತಾನೆ.

೧೪. ಶಿವೆಯೊಲಿದರೆ ಸರಸ್ವತಿಯೊಲಿಯುವುದೇನೂ ಕಷ್ಟವಿಲ್ಲ.

೨೦. ಬ್ರಹ್ಮ ವಿಷ್ಣು ದೇವೇಂದ್ರರೆಲ್ಲ ದೇವಿಯ ಮುಂದೆ ತಲೆಬಾಗಿ ನಿಂತಿರುವುದರಿಂದ ಅವರ ಕಿರೀಟಗಳು ಅವಳಿಗೆ ಆರತಿ ಬೆಳಗುವಂತಿವೆ.

೨೨. ಸೃಷ್ಟಿ ಸ್ಥಿತಿ ಲಯಗಳು ಮಾತ್ರವಲ್ಲದೆ ಬ್ರಹ್ಮವಿಷ್ಣು ರುದ್ರರೆಲ್ಲ ದೇವಿಯ ಇಚ್ಛೆಗೆ ಅಧೀನ.

೨೩. ದೇವಿಯ ಸತ್ತ್ವಗುಣ ರಜೋಗುಣ ತಮೋಗುಣಗಳಿಂದ ಬ್ರಹ್ಮ ವಿಷ್ಣು ರುದ್ರರು ಹುಟ್ಟಿದರು. ಆದ್ದರಿಂದ ಅವಳಿಗೆ ಸಲ್ಲಿಸುವ ಪೂಜೆ ಈ ದೇವತೆಗಳಿಗೂ ಸಲ್ಲುತ್ತದೆ.

೨೪. ವಿರಿಂಚಿ—ಬ್ರಹ್ಮ. ಕೀನಾಶ—ಯಮ. ದೇವಿಯ ಪಾತಿವ್ರತ್ಯಮಹಿಮೆಯಿಂದ ಸದಾಶಿವ ಚಿರಂಜೀವಿ.

೨೫. ಜಲ್ಪ—ಮಾತು. ಹವನ—ಹೋಮದ ಆಹುತಿ.

೨೬. ಸಮುದ್ರಮಥನಕಾಲದಲ್ಲಿ ಶಿವ ವಿಷಪಾನ ಮಾಡಿದ ಘಟನೆಯಿಲ್ಲಿ ಸೂಚಿತ.

೨೭. ಬ್ರಹ್ಮ ವಿಷ್ಣು ದೇವೇಂದ್ರರು ಜಗದ್ಧಾತ್ರಿಯ ಮನೆಯಲ್ಲಿ ಸದಾ ನಮಸ್ಕಾರ ಮಾಡುತ್ತಿರುತ್ತಾರೆ; ಆಕೆ ನಡೆಯುವಾಗ ಅವರ ಕಿರೀಟಗಳನ್ನು ಎಡಹುವ ಸಂಭವವೂ ಉಂಟು.

೩೦. ದೇವಿಯ ಕಿರೀಟದಲ್ಲಿ ದ್ವಾದಶಾದಿತ್ಯರೆ ಮಣಿರೂಪದಿಂದ ನೆಲಸಿದ್ದಾರೆ. ಅಲ್ಲಿರುವ ಚಂದ್ರಖಂಡ ಕಿರೀಟದ ರತ್ನಕಾಂತಿಯಿಂದ ಸಪ್ತವರ್ಣ ತಳೆದು ಕಾಮನ ಬಿಲ್ಲಿನಂತಿದೆ.

೩೧. ಚಿಕುರ—ತಲೆಗೂದಲು. ನಿಕುರುಂಬ—ರಾಶಿ. ದೇವಿಯ ತುರುಬಿನಲ್ಲಿ ಪರಿಮಳ ಸಹಜವಾಗಿ ತುಂಬಿದೆ; ಇಂದ್ರನಂದನದ ಪುಷ್ಪಗಳೆಲ್ಲ ಅಲ್ಲಿಂದಲೆ ತಮ್ಮ ಸುವಾಸನೆಯನ್ನು ಪಡೆದುಕೊಳ್ಳುತ್ತವೆ.

೩೨. ದೇವಿಯ ಕೇಶರಾಶಿ ಕತ್ತಲೆಯಂತಿದೆ; ಅವಳ ಬೈತಲೆಯಲ್ಲಿರುವ ಕುಂಕುಮ ತನ್ನ ಹಗೆಯಾದ ಕತ್ತಲೆಗೆ ಸೆರೆಯಾದ ಬಾಲರವಿಕಿರಣದಂತೆ ಕೆಂಪಾಗಿ ತೊಳಗುತ್ತಿದೆ. ಅವಳ ಬೈತಲೆಯ ರೇಖೆ ಮುಖಲಾವಣ್ಯರಸ ಹೊನಲುವರಿಯುವ ದಾರಿಯಂತಿದೆ. ಸರಣಿ—ದಾರಿ.

೩೩. ದೇವಿಯ ಮುಖವನ್ನು ತಾವರೆಗೆ ಹೋಲಿಸಲಾಗಿದೆ; ಶುಭ್ರದಂತಪಂಕ್ತಿಯ ಕಾಂತಿಯೆ ಅದರ ಕೇಸರ, ಸುವಾಸನೆ ಅದರಲ್ಲಿ ಸಹಜವಾಗಿಯೆ ಇದೆ. ಹರನ ಕಣ್ಣುಗಳೆ ಅದಕ್ಕೆ ಮುತ್ತುವ ದುಂಬಿಗಳು.

೩೪. ಕಿರೀಟದಿಂದ ಕೂಡಿದ ದೇವಿಯ ಹಣೆ ಅರ್ಧ ಚಂದ್ರಾಕೃತಿಯಲ್ಲಿದೆ; ಅವಳ ಕಿರೀಟದಲ್ಲೊಂದು ಚಂದ್ರಖಂಡ ಇದ್ದೇ ಇದೆ. ಒಂದು ಅಧಃಶೃಂಗ, ಮತ್ತೊಂದು ಊರ್ಧ್ವಶೃಂಗ, ಆದರೂ ಎರಡೂ ಹೇಗೊ ತಳಮೇಲಾಗಿ ಪೂರ್ಣಚಂದ್ರನ ರೂಪ ತಾಳುತ್ತವೆ.

೩೫. ಲೋಕದ ಭಯವನ್ನು ನಿವಾರಿಸುವುದೇ ದೇವಿಗೆ ಸದಾ ಇರುವ ವ್ಯಸನ. ಅವಳ ನಸುಬಾಗಿದ ಹುಬ್ಬುಗಳು ಮನ್ಮಥನ ಬಿಲ್ಲಿನಂತೆ; ಅದನ್ನು ಅವನು ಎಡಗೈಯಲ್ಲಿ ಹಿಡಿದಿರುವುದರಿಂದ ಅದರ ಮಧ್ಯಭಾಗ ಕಾಣುತ್ತಿಲ್ಲವಷ್ಟೆ. ಮಧುಪ—ದುಂಬಿ.

೩೬. ಈ ಚಮತ್ಕಾರಯುತ ಪದ್ಯದಲ್ಲಿ ಪಾರ್ವತಿಯ ನೋಟವನ್ನು ಬಣ್ಣಿಸುವ ವ್ಯಾಜದಿಂದ ಪ್ರಮುಖವಾದ ಕೆಲವು ನಗರಗಳನ್ನು ಹೆಸರಿಸಲಾಗಿದೆ. ವಿಶಾಲಾ,

ಕಲ್ಯಾಣಿ, ಅಯೋಧ್ಯಾ, ಧಾರಾ, ಮಧುರಾ, ಭೋಗವತಿ, ಅವಂತಿ, ವಿಜಯಾ- ಈ ಪಟ್ಟಣಗಳು ಇಲ್ಲಿ ಉಕ್ತವಾಗಿವೆ. ಈ ಮಾತುಗಳು ಅಂಬಿಕೆಯ ನೋಟಕ್ಕೆ ವಿಶೇಷಣಗಳೂ ಹೌದು. ಅವಳ ದೃಷ್ಟಿ ವಿಶಾಲ, ಕಲ್ಯಾಣಕರ, ಕುಮುದಗಳಿಂದ ಜಯಿಸಲಾಗದ್ದು (ಅಯೋಧ್ಯಾ), ದಯೆಯ ಧಾರೆಗೆ ಆಲಂಬನ, ಮಧುರ, ಸೋಗೆಯಾಗಿರುವಂಥದು (ಆಭೋಗವತಿಕಾ), ರಕ್ಷಿಸುವಂಥದು (ಅವಂತಿ)- ಎಂದು ಅರ್ಥೈಸಬೇಕು. ಇಲ್ಲಿ ಎಂಟು ದೃಷ್ಟಿವಿಶೇಷಗಳನ್ನು ಹೇಳಲಾಗಿದೆ.

೩೮. ದೇವಿಯ ಎರಡು ಕಿವಿಗಳೂ ಕಾವ್ಯರಸವನ್ನು ಸವಿಯುತ್ತವೆ; ಅವಳ ಕಡೆಗಣ್ಣುಗಳು ಕಿವಿಯವರೆಗೆ ಹಬ್ಬಿರುವುದರಿಂದ ಅವಕ್ಕೂ ಕಾವ್ಯರಸಪಾನ ಸಿಕ್ಕುತ್ತದೆ. ಇವುಗಳ ಭಾಗ್ಯವನ್ನು ಕಂಡು ಮತ್ಸರದಿಂದಲೊ ಎಂಬಂತೆ ದೇವಿಯ ಹಣೆಗಣ್ಣು ನಸು ಕೆಂಪಾಗಿದೆ ಎಂದು ಸಹಜರಕ್ತವರ್ಣಕ್ಕೆ ಕಾರಣ ಹೇಳಲಾಗಿದೆ.

೩೯. ಈ ಪದ್ಯದಲ್ಲಿ ದೇವಿಯ ನೋಟ ನವರಸಪೂರ್ಣವೆಂದು ಚಮತ್ಕಾರದಿಂದ ನಿರೂಪಿಸಲಾಗಿದೆ.

೪೦. ದೇವಿಯ ಕಣ್ಣುಗಳು ಮನ್ಮಥನ ಬಾಣಗಳಂತಿವೆ; ಅವುಗಳನ್ನವನು ಕಿವಿಯ ತನಕ ಸೆಳೆದಿದ್ದಾನೆ; ರೆಪ್ಪೆಗಳೆ ಆ ಬಾಣಗಳ ಗರಿಗಳು.

೪೧. ಈಶಾನದಯಿತೆ—ಶಿವನ ಪ್ರಿಯೆ, ಪಾರ್ವತಿ. ದೇವಿ ಕಾಡಿಗೆ ಹಚ್ಚಿಕೊಂಡಾಗ ಅಲ್ಲಿ ಬಿಳುಪು, ಕೆಂಪು, ಕಪ್ಪು ಬಣ್ಣಗಳು ಉಂಟಾಗಿ ಸತ್ತ್ವರಜಸ್ತಮೋ ಗುಣಗಳಂತೆ ಕಾಣುತ್ತವೆ. ಹಣೆಗಣ್ಣು ಸಹಜವಾಗಿ ಕೆಂಪು ಎಂಬುದನ್ನು ಲಕ್ಷಿಸಬಹುದು.

೪೩. ಶೋಣಭದ್ರ—ಒಂದು ನದಿಯ ಹೆಸರು; ಇದರ ನೀರು ಕೆಂಪಂತೆ. ಗಂಗೆಯ ನೀರು ಬಿಳುಪು, ಯಮುನೆಯದು ಕಪ್ಪು. ದೇವಿ ಕಾಡಿಗೆ ಹಚ್ಚಿಕೊಂಡಾಗ ಉಂಟಾಗುವ ತ್ರಿವರ್ಣಗಳು ಈ ಮೂರು ನದಿಗಳ ಸಂಗಮದಂತೆ ಕಾಣುತ್ತವೆ.

೪೪. ಅಪರ್ಣೆ—ಪಾರ್ವತಿ. ಮೀನುಗಳು ಯಾವಾಗಲೂ ಕಣ್ಣು ಮುಚ್ಚದೆ ನೀರಿನಲ್ಲಿ ಮಲಗಿರುತ್ತವೆ; ಕುಮುದಗಳು ಹಗಲಿನಲ್ಲಿ ಮುಚ್ಚಿಕೊಂಡು ಇರುಳು ಅರಳುತ್ತವೆ. ಈ ಸಹಜಸ್ವಭಾವಕ್ಕೆ ಇಲ್ಲಿ ಅನ್ಯಕಾರಣ ಹೇಳಲಾಗಿದೆ. ಮೀನುಗಳ ಮತ್ತು ನೈದಿಲೆಗಳ ಸೌಂದರ್ಯವನ್ನು ಕಿತ್ತುಕೊಳ್ಳಬೇಕೆಂದು ದೇವಿಯ ಕಣ್ಣುಗಳು ಕಿವಿಗಳಿಗೆ ಚಾಡಿ ಹೇಳಿದ್ದರಿಂದ ಹೆದರಿ ಮೀನುಗಳು ನೀರುಹೊಕ್ಕುವು; ಕುಮುದಲಕ್ಷ್ಮಿ ಹಗಲಿನಲ್ಲಿ ಬಾಗಿಲು ಹಾಕಿಕೊಂಡು ಇರುಳಿನಲ್ಲಿ ಯಾರಿಗೂ ಕಾಣಿಸದಂತೆ ಅಡಗಿಕೊಂಡಿರುವಳು. ಕಣ್ಣುಗಳನ್ನು ಮೀನುಗಳಿಗೂ ಕನ್ನೈದಿಲೆಗಳಿಗೂ ಹೋಲಿಸುವುದನ್ನು ಅವು ಕಿವಿಯವರೆಗೆ ಚಾಚಿರುವುದನ್ನು ನೆನೆದರೆ ಇಲ್ಲಿನ ಉಕ್ತಿ[illegible] ಅರ್ಥವಾಗುತ್ತದೆ.

೪೬. ಶಿವೆಯ ಬಾಗಿದ ಹುಬ್ಬುಗಳೇ ಮನ್ಮಥನ ಬಿಲ್ಲು; ಕಿವಿಯಾಚೆಗೂ ಚಾಚಿಕೊಂಡಿರುವ ಅವಳ ನೋಟವೇ ಬಾಣ.

೪೭. ದೇವಿಯ ಎರಡು ಕಿವಿಯೋಲೆಗಳು ಅವಳ ಕನ್ನಡಿಯಂಥ ಕಪೋಲದಲ್ಲಿ ಪ್ರತಿಫಲಿಸುವುದರಿಂದ ನಾಲ್ಕು ಓಲೆಗಳಾದಂತಾಯಿತು; ಅವು ನಾಲ್ಕು ಚಕ್ರಗಳಂತೆಯೂ ಅವಳ ಮುಖ ಚತುಶ್ಚಕ್ರಗಳನ್ನು ತಳೆದ ಮದನರಥದಂತೆಯೂ ಕಾಣಿಸುತ್ತದೆ. ಸೂರ್ಯಚಂದ್ರರನ್ನೆ ಗಾಲಿ ಮಾಡಿಕೊಂಡು, ಭೂಮಿಯನ್ನೆ ರಥ ಮಾಡಿಕೊಂಡು ಬರುವ ಪ್ರಮಥವಲ್ಲಭ (ಹರ) ನನ್ನು ದೇವಿಯ ವದನರಥವನ್ನೇರಿ ಮನ್ಮಥ ಸೋಲಿಸಿ ಬಿಡುತ್ತಾನೆ. ಇಲ್ಲಿ ಬರುವ ರುದ್ರನ ಚಿತ್ರ ತ್ರಿಪುರಸಂಹಾರದ ಕತೆಗೆ ಸಂಬಂಧಿಸಿದ್ದು; ಮನ್ಮಥನ ಚಿತ್ರ ಮಾತ್ರ ಕಾಲ್ಪನಿಕ.

೪೯. ಬಿದಿರಿನಲ್ಲಿ ಮುತ್ತು ಹುಟ್ಟುವುದೆಂಬ ಕವಿಸಮಯ ಇಲ್ಲಿ ಲಕ್ಷ್ಯದಲ್ಲಿರಬೇಕು.

೫೦. ದೇವಿಯ ತುಟಿಗೆ ಹವಳದ ಬಳ್ಳಿಯೂ ಸಾಟಿಯಲ್ಲ; ಅದು ಅಷ್ಟು ಕೆಂಪು. ಒಂದು ವೇಳೆ ಹವಳದ ಬಳ್ಳಿ ಹಣ್ಣು ಬಿಟ್ಟರೆ ಅದು ಅವಳ ತುಟಿಯನ್ನು ಹೋಲಬಹುದೇನೊ. ತುಟಿಯನ್ನು ತೊಂಡೆಹಣ್ಣಿಗೆ ಉಪಮಿಸುವುದು ಕವಿಪದ್ಧತಿ; ಆದರೆ ದೇವಿಯ ತುಟಿಯ ಮುಂದೆ ಅದು ನಿಲ್ಲಲಾರದು; ಅವಳ ತುಟಿಯಿಂದಲೇ ಅದಕ್ಕೆ ಕಾಂತಿ.

೫೧. ದೇವಿಯ ಮುಖಚಂದ್ರನ ಬೆಳ್ದಿಂಗಳನ್ನು ಕುಡಿದು ಕುಡಿದು ಚಕೋರಗಳಿಗೆ ಬೇಸರವಾಗಿ, ರುಚಿ ಬದಲಾವಣೆಗಾಗಿ ಅವು ಚಂದ್ರಿಕಾಪಾನ ಮಾಡುತ್ತಿರುವಂತೆ ತೋರುತ್ತದೆ.

೫೨. ಜಪಾಸುಮ—ಕೆಂಪು ದಾಸವಾಳ. ದೇವಿಯ ನಾಲಗೆ ಸಹಜವಾಗಿ ಕೆಂಪು; ಆದರೆ ಪತಿಯ ಗುಣಕಥನದಿಂದ ಅದು ಕೆಂಪೇರಿದೆಯೆಂಬುದು ಉತ್ಪ್ರೇಕ್ಷೆ. ಶಾರದೆಯ ಮೂರ್ತಿ ಸಹಜವಾಗಿ ಬಿಳಿದಾದರೂ, ಆ ನಾಲಗೆಯ ಮೇಲೆ ನೆಲೆಗೊಂಡುದರಿಂದ ಮಾಣಿಕ್ಯದಂತೆ ರಕ್ತವರ್ಣ ತಳೆದಿದೆ.

೫೩. ಷಣ್ಮುಖ ಉಪೇಂದ್ರ ದೇವೇಂದ್ರರಿಗೆ ಶಂಭುವಿನ ನಿರ್ಮಾಲ್ಯ (ಪ್ರಸಾದ) ಬೇಕಾಗಿಲ್ಲ; ಅದು ಚಂಡೇಶ್ವರನಿಗೇ ಇರಲಿ. ಅವರಿಗೆ ಬೇಕಾದುದು ದೇವಿಯ ಪ್ರಸಾದ. ಅವಳು ಉಪೇಂದ್ರ ದೇವೇಂದ್ರರನ್ನು ತನ್ನ ಪುತ್ರನಾದ ಷಣ್ಮುಖನಿಗೆ ಸಮಾನವಾಗಿ ಕಂಡು ಪ್ರೀತಿಯಿಂದ ಬಾಯ್ದಂಬುಲ ನೀಡುತ್ತಾಳೆ.

೫೪. ದೇವಿಯ ನುಡಿಗಳ ಮಾಧುರ್ಯವನ್ನು ವಾಣಿಯ ವೀಣಾಗಾನವೂ ಸರಿಗಟ್ಟಲಾರದು.

೫೬. ದೇವಿಯ ಮುಖವೆ ಕಮಲ, ಕೊರಳು ಅದರ ನಾಳ, ಅಗುರಿನಿಂದ ಕಪ್ಪಾದ ಮಾಲೆಯೆ ಅದರ ಬಳ್ಳಿ.

೫೭. ಕಂಠದಲ್ಲಿ ಮೂರು ರೇಖೆಗಳಿದ್ದರೆ ಅದು ಮಹಾಸೌಭಾಗ್ಯ ಸೂಚಕವಂತೆ. ಮಂಗಳಸೂತ್ರಗಳು ಮೂರಿರಬೇಕೆಂಬುದು ಶಾಸ್ತ್ರೋಕ್ತ. ಗ್ರಾಮವೆಂದರೆ ಸ್ವರಸಮೂಹ; ಇವು ಮೂರು: ಷಡ್ಜಗ್ರಾಮ, ಮಧ್ಯಮಗ್ರಾಮ, ಗಾಂಧಾರಗ್ರಾಮ.

೫೮. ಅಂಧಕಾರಿ— ಈಶ್ವರ; ಅಂಧಕಾಸುರನನ್ನು ಕೊಂದವನು.

೬೦. ಹೇರಂಬ—ಗಣಪತಿ. ಪಾರ್ವತಿಯ ಕುಚಗಳು ಆನೆಯ ಕುಂಭಸ್ಥಳದಂತಿವೆ; ಅವುಗಳನ್ನು ನೋಡಿ ಗಣಪ ತನ್ನ ಕುಂಭಸ್ಥಳಗಳು ಅಲ್ಲಿಗೇನಾದರೂ ಹೋಗಿ ಬಿಟ್ಟುವೊ ಎಂದು ಮುಟ್ಟಿನೋಡಿಕೊಳ್ಳುತ್ತಾನೆ.

೬೩. ಸರಸ್ವತಿ ಶ್ವೇತವರ್ಣೆ; ಆದ್ದರಿಂದ ದೇವಿಯ ಮೊಲೆಹಾಲು ಸರಸ್ವತಿಯ ರೂಪವಲ್ಲದೆ ಬೇರೆಯಲ್ಲ.

೬೪. ಕಾಮದಹನದ ಘಟನೆ ಇಲ್ಲಿ ಸೂಚಿತ. ರಾಜಿ—ಸಾಲು.

೬೫. ಕಾಳಿಂದಿ—ಯಮುನೆ. ದೇವಿಯ ಕಪ್ಪಾದ ರೋಮಾವಳಿಯನ್ನು ನೋಡಿದರೆ, ನೀಲವ್ಯೋಮವೆ ಸಂಕುಚಿತವಾಗಿ ಅವಳ ನಾಭಿಯನ್ನು ಪ್ರವೇಶಿಸುತ್ತಿರುವಂತೆ ಕಾಣುತ್ತದೆ. ಅವಳ ರೋಮಾವಳಿ ನೀಲಾಕಾಶದಂತೆ ಎಂದು ಅಭಿಪ್ರಾಯ.

೬೬. ದೇವಿಯ ರೋಮರಾಜಿಯೆ ಲತೆ, ಮೊಲೆಯೆ ಅದರ ಮೊಗ್ಗು, ನಾಭಿಯೆ ಪಾತೆ.

೭೧. ದೇವಿಯ ಮೀನಖಂಡವೆ ಬತ್ತಳಿಕೆ, ಪಾದದ ಉಗುರುಗೊನೆಗಳೆ ಶರಗಳು; ದೇವಿಯ ಪಾದಕ್ಕೆ ಸುರರು ಸದಾ ಎರಗುವುದರಿಂದ ಅವರ ಮಕುಟಗಳು ತಾಗಿ ತಾಗಿ ಆ ಬಾಣಗಳು ಹರಿತವಾಗಿವೆ.

೭೩. ಅಶೋಕ ವೃಕ್ಷ ದೋಹದಕ್ಕಾಗಿ ದೇವಿಯ ಚರಣತಾಡನವನ್ನು ಬಯಸಿದರೆ, ಆ ಅಚೇತನವಾದ ಮರಕ್ಕೂ ತನ್ನಂತೆ ತಾಡನಸೌಖ್ಯ ಉಂಟಾಗುವುದಲ್ಲಾ ಎಂದು ಮಹಾದೇವನಿಗೆ ಅಸೂಯೆ.

೭೪. ಈಶ್ವರ ಮರೆತು ಪಾರ್ವತಿಯನ್ನು ಬೇರೊಬ್ಬ ಸ್ತ್ರೀಯ ಹೆಸರಿನಿಂದ ಕರೆದುದು ಅವನ ಅಪರಾಧ. ಆಕೆ ಅವನನ್ನು ಒದೆದಾಗ ಉಂಟಾದ ಕಾಲ್ಗಡಗದ ದನಿ ಮನ್ಮಥನ ಜಯಘೋಷದಂತಿದೆ. ತನ್ನನ್ನು ಹಿಂದೆ ಸುಟ್ಟ ಶಿವನ ಮೇಲೆ ಅವನೀಗ ಸೇಡುತೀರಿಸಿಕೊಳ್ಳುವಂತೆ ತೋರುತ್ತಿದೆ.

೭೫. ಕಮಲಗಳು ದೇವಿಯ ಪಾದಯುಗಕ್ಕೆ ಸಮಾನವಲ್ಲ. ಅವು ಮಂಜಿನಲ್ಲಿ ಕೆಡುತ್ತವೆ, ಇರುಳು ಮುಚ್ಚಿಕೊಳ್ಳುತ್ತವೆ, ಲಕ್ಷ್ಮಿಗೆ ಕೇವಲ ಆವಾಸವಾಗಿವೆ. ದೇವಿಯ ಪಾದಗಳಾದರೊ ಮಂಜಿನಲ್ಲಿ ಕೆಡುವುದಿಲ್ಲ. (ಹಿಮಾಲಯವೆ ಅವಳ ತೌರುಮನೆ, ಪತಿಗೃಹ), ಇರುಳು ಮುಚ್ಚಿಕೊಳ್ಳುವುದಿಲ್ಲ, ಲಕ್ಷ್ಮಿಯನ್ನು ಬೇಡಿದವರಿಗೆ ಅನುಗ್ರಹಿಸುತ್ತವೆ.

೭೭. ದೇವಿಯ ಚರಣಯುಗಳ ದೇವಸ್ತ್ರೀಯರ ಕರಕಮಲಗಳನ್ನು ನಖಚಂದ್ರನಿಂದ ಮುಚ್ಚಿಸುತ್ತದೆ—ಎಂದರೆ, ಅವರು ದೇವಿಯ ಚರಣಗಳಿಗೆ ಕೈಮುಗಿಯುತ್ತಾರೆ. ಸುರತರುಗಳನ್ನು ದೇವಿಯ ಚರಣಗಳು ನಾಚಿಸುತ್ತವೆ; ಏಕೆಂದರೆ, ಆ ಕಲ್ಪವೃಕ್ಷಗಳು ದೇವತೆಗಳಿಗಷ್ಟೆ ಫಲ ಕೊಡತಕ್ಕದ್ದು, ದೇವಿಯ ಪಾದಗಳಾದರೊ ಸಕಲಲೋಕಕ್ಕೂ ವರವೀಯುತ್ತವೆ.

೭೮. ದೇವಿಯ ಪಾದಾಭಿಷೇಕ ಜಲ ಅವಳ ಕಾಲಿಗೆ ಹಚ್ಚಿದ ಅಲತಿಗೆರಸದಿಂದ ಕೆಂಪಾಗಿ, ಸರಸ್ವತಿಯ ಮುಖದ ತಾಂಬೂಲರಸದಂತೆ ಕಂಗೊಳಿಸುತ್ತದೆ.

೮೦. ಅರಾವ—ಶಬ್ದ.

೮೧. ಶಿರಿಷ—ಶಿರೀಷ ಕುಸುಮ. ಪೃಥುಲ—ವಿಶಾಲ.

೮೨. ತರಳ—ಚಂಚಲ. ಇಂದ್ರಾದಿ ಸುರರು ದೇವಿಯ ಅಂತಃಪುರವನ್ನು ಪ್ರವೇಶಿಸಲಾರದೆ ಬಾಗಿಲಲ್ಲೆ ನಿಂತು ಸಿದ್ಧಿಗೊಳ್ಳುತ್ತಾರೆ. ಅಣಿಮಾದಿ ಸಿದ್ಧಿಗಳು ದೇವಿಯ ಬಾಗಿಲಲ್ಲೆ ಯಾವಾಗಲೂ ಇರತಕ್ಕದ್ದು.

೮೩. ಶೃಂಗಾರರಸ ಕೆಂಪು ಎಂದು ಕಲ್ಪನೆ.

೮೪. ಚಂದ್ರನ ವೃದ್ಧಿಕ್ಷಯಗಳಿಗೆ ಇಲ್ಲಿ ಉತ್ಪ್ರೇಕ್ಷೆಯಿಂದ ಕಾರಣ ಹೇಳಲಾಗಿದೆ.

೮೫. ಅಣಿಮಾದಿಗಳು—ಅಣಿಮಾದಿ ಅಷ್ಟೈಶ್ವರ್ಯಗಳು. ನಿತ್ಯೆಯರು—ತ್ರಿಪುರಸುಂದರಿ ಮುಂತಾದ ಹದಿನಾರು ಮಂದಿ ನಿತ್ಯೆಯರು. ದೇವಿಯೆ ತಾನು ಎಂದು ಐಕ್ಯಭಾವದಿಂದ ಸ್ತುತಿಸುವವನಿಗೆ ಪ್ರಲಯಕಾಲಾಗ್ನಿಯೆ ಆರತಿಯಾಗುತ್ತದೆ. ದೇವಿಯ ಮಹಿಮೆ ಅಂಥದು.

೮೬. ವಿಧಿಯ ಪತ್ನಿ—ಸರಸ್ವತಿ. ಹರಿಸತಿ—ಲಕ್ಷ್ಮಿ. ಮರಗಳಿಗೆ ದೇವಿಯ ಪಾದತಾಡನ ಸಿಕ್ಕಬಹುದೆ ಹೊರತು ಆಲಿಂಗನಭಾಗ್ಯ ಸಿಕ್ಕದು.

೮೭. ವಪು—ದೇಹ.

೮೮. ಪರಬ್ರಹ್ಮಮಹಿಷಿ—ಪರಬ್ರಹ್ಮವಾದ ಸದಾಶಿವನ ಪತ್ನಿ.

೮೯. 'ಸ್ವಂತ ಕಿರಣಾಳಿಯಿಂದ' ಎಂದರೆ ರವಿಯ ಕಿರಣಗಳಿಂದ ಎಂದೂ 'ತನ್ನ ಜಲದಿಂದ' ಎಂದರೆ ಕಡಲಿನ ಜಲದಿಂದ ಎಂದೂ ಅನ್ವಯಿಸಿಕೊಳ್ಳಬೇಕು.

ಸಿ. ಪಿ. ಕೆ. ಅವರ ಕೃತಿಗಳು

ಕವಿತೆ

ತಾರಾಸಖ
ಅನಂತ-ಪೃಥ್ವೀ
ಪ್ರಕೃತಿ

ವಿಮರ್ಶೆ

ಕನ್ನಡ ಚತುರ್ಮುಖ
ಕಾವ್ಯಾರಾಧನ
ಜಾನಪದ ಪ್ರತಿಭೆ
ಪರಿಭಾವನೆ
ಜನ್ನ
ನಾಗಚಂದ್ರ

ಅನುವಾದ

ಸಾಹಿತ್ಯ ಪ್ರವೇಶ
ಸಾಹಿತ್ಯ ವಿಮರ್ಶೆಯ ತತ್ತ್ವಗಳು
ಕನ್ನಡ ನಾಗಾನಂದ
ಕನ್ನಡ ಯಶೋಧರಚರಿತ
ಭಾಸನ ಎರಡು ನಾಟಕಗಳು
ಕನ್ನಡ ಸೌಂದರ್ಯಲಹರಿ

ಸಂಪಾದಿತ

ಹರಿಶ್ಚಂದ್ರ ಸಾಂಗತ್ಯ